ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 32 ಆಗಸ್ಟ್ 5, 1984 ಬೆಲೆ 60 ಪೈಸೆ.

ಕಾಂಗ್ರೆಸ್ ಪಿತೂರಿಯನ್ನು ಸೋಲಿಸಿರಿ

— ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಕರೆ

ನಮ್ಮ ರಾಜ್ಯದ ಇತ್ತೀಚಿಗಿನ ಘಟನೆಗಳು ಪುನಃ ದೇಶದ ಗಮನವನ್ನು ಸೆಳೆದಿವೆ. ಪಂಜಾಬಿನಲ್ಲಿ ನಡೆದ ಸೈನ್ಯಾಚರಣೆ, ಕಾಶ್ಮೀರದಲ್ಲಿ ಫರೂಕ್ ಅಬ್ದುಲ್ಲಾ ಸರಕಾರದ ವಿಸರ್ಜನೆ ಮತ್ತು ಜಿ. ಎಂ. ಷಾ ರವರ ಮಂತ್ರಿ ಮಂಡಲದ ಸ್ಥಾಪನೆ ಇವುಗಳ ಹಿನ್ನೆಲೆಯಲ್ಲಿ ಕರ್ನಾಟಕದಲ್ಲೂ ಕಾವು ಏರುತ್ತಿರುವುದು ಕಂಡು ಬರುತ್ತಿದೆ. ಕಾರ್ಮಿಕ ಸಚಿವ ಶ್ರೀ ಅಜೀಜ್ ಸೇಟ್ ಮತ್ತು ಶ್ರೀಮತಿ ಚಂದ್ರ ಪ್ರಭಾ ಅರಸ್ (ಸಮಾಜ ಕಲ್ಯಾಣ ಇಲಾಖೆಯ ಮಂತ್ರಿ) ಇವರು ಹೆಗಡೆಯವರ ಮಂತ್ರಿಮಂಡಲಕ್ಕೆ ರಾಜಿನಾಮೆ ಕೊಟ್ಟಿದ್ದಲ್ಲದೆ ಜನತಾ ಪಕ್ಷಕ್ಕೂ ರಾಜಿನಾಮೆ ಕೊಟ್ಟು ಸ್ವತಂತ್ರರಾಗಿರುತ್ತೇವೆಂದಿದ್ದಾರೆ. ಇವರು ರಾಜಿನಾಮೆ ಕೊಡುವರೆಂದು ಹಲವು ತಿಂಗಳಿಂದ ಕೇಳಿ ಬರುತ್ತಿತ್ತು. ಆದ್ದರಿಂದ ಅವರ ರಾಜೀನಾಮೆ ಅನಿರೀಕ್ಷಿತವಾಗಿ ಬರಲಿಲ್ಲ, ಆಶ್ಚರ್ಯವನ್ನೂ ಉಂಟು ಮಾಡಲಿಲ್ಲ. ಆದರೆ ದೇಶದ ಸಮಗ್ರ ಬೆಳವಣಿಗೆಗಳ ಮತ್ತು ಮುಂಬರುವ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಜನತೆಯ ಗಮನವನ್ನು ಇವು ಸೆಳೆಯುವಂತಾಗಿದೆ.

ಸೇಠ್‌ರವರು ಮಾಡಿದ್ದೇನು?

ಕಾರ್ಮಿಕ ಸಚಿವರಾಗಿದ್ದ ಅಜೀಜ್ ಸೇಠ್‌ರವರು ಹಿಂದೆ ಹಲವು ಬಾರಿ ಕಾಂಗ್ರೆಸ್ ಮಂತ್ರಿ ಮಂಡಲಗಳಲ್ಲಿ ಮಂತ್ರಿಯಾಗಿದ್ದರು. ಹಿಂದೆ ರಾಜ್ಯದ ಸೋಷಲಿಸ್ಟ್ ಪಕ್ಷದ ಅಧ್ಯಕ್ಷರಾಗಿದ್ದವರು ಏಕಾ ಏಕಿಯಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರಿ, ಆ ಪಕ್ಷದಲ್ಲಿ ಹಲವು ಕಾಲ ಶಾಸಕರಾಗಿಯೂ, ಮಂತ್ರಿಯಾಗಿಯೂ ಇದ್ದು ಕೊನೆಗೆ ಕ್ರಾಂತಿ ರಂಗಕ್ಕೆ ಸೇರಿ ಜನತಾ ಪಕ್ಷದಲ್ಲಿ ಸಚಿವರಾಗಿ ಬಂದರು. ಕಾರ್ಮಿಕ ಸಚಿವರಾದ ನಂತರ ನಮ್ಮ ರಾಜ್ಯದ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಅವರು ವಹಿಸಿದ ಪಾತ್ರ ಕಾರ್ಮಿಕರಲ್ಲಿ ನಿರಾಶೆಯನ್ನುಂಟು ಮಾಡಿದೆ. ಅವರ ಹೇಳಿಕೆಗಳು ಮಾಲಿಕರಿಗೆ ಅನುಕೂಲವಾಗಿತ್ತಲ್ಲದೆ ಕಾರ್ಮಿಕ ವರ್ಗಕ್ಕೆ ಅಪಾರ ಹಾನಿಯನ್ನುಂಟು ಮಾಡಿತ್ತು.

ಇದರಿಂದಾಗಿ ಕಾರ್ಮಿಕ ಇಲಾಖೆಯನ್ನು ಇವರ ಬದಲಾಗಿ ಬೇರೆಯವರಿಗೆ ಕೊಡಬೇಕೆಂಬ ಬೇಡಿಕೆಯನ್ನು ಸಿಐಟಿಯು ಕೊಡುವಂತಾಯಿತು. ಈಗ ಅವರೇ ಹೊರ ಬಂದಿದ್ದರಿಂದ ಯಾರಿಗೂ ಬೇಸರವಿಲ್ಲ. ಕಾರ್ಮಿಕ-ಮಾಲಿಕ ವಿವಾದಗಳಲ್ಲಿ ಅವರು ಹೆಚ್ಚಾಗಿ ಮಾಲಿಕರ ಪರವಾಗಿದ್ದರೆಂದು ಮುಖ್ಯಮಂತ್ರಿ ಹೆಗಡೆಯವರೇ ಈಗ ಹೇಳಿದ್ದಾರೆ. ಅಜೀಜ್ ಸೇಠ್‌ರವರು ಮುಂದೇನು ಮಾಡುವರೆಂದು ನೋಡಬೇಕಾಗಿದೆ. ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿದ್ದ ಚಂದ್ರ ಪ್ರಭಾ ಅರಸುರವರು, ರಾಜಿನಾಮೆ ಕೊಡುತ್ತಾರೆಂದು ಹಲವು ಬಾರಿ ಸುದ್ದಿ ಪತ್ರಿಕೆಗಳಲ್ಲಿ ಬರುತ್ತಿತ್ತು. ಈಗ ಅವರು ತಮ್ಮ ತಂದೆಯವರ ಧೋರಣೆಗಳನ್ನು ಜಾರಿಗೆ ತರಲು ಕ್ರಾಂತಿ ರಂಗಕ್ಕೆ ದುಡಿಯುತ್ತೇನೆಂದು ಹೇಳಿರುತ್ತಾರೆ. ಇಷ್ಟು ದಿವಸ ಅದನ್ನು ಮಾಡಲು ಯಾಕೆ ಆಗಲಿಲ್ಲವೆಂದು ಅವರು ಹೇಳಿಲ್ಲ.

ಮಂತ್ರಿಮಂಡಲದ ಪುನರ್ರಚನೆ ವಿಧಾನ

ಇವರ ರಾಜಿನಾಮೆ ಅಷ್ಟು ಮಹತ್ವದ್ದಿದ್ದರೂ ಈಗಿನ ಪರಿಸ್ಥಿತಿ ಅದಕ್ಕೆ ಮಹತ್ವವನ್ನು ಕೊಟ್ಟಿದೆ. ಒಂದು ಕಡೆ ಜನತಾ ಪಕ್ಷದಲ್ಲೇ ಮಂತ್ರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲೆಂಬ ಅಭಿಪ್ರಾಯವಿದ್ದು ಮಂತ್ರಿಮಂಡಲವನ್ನು ವಿಸ್ತರಿಸುವ ಕಾರ್ಯವನ್ನು ಮುಖ್ಯಮಂತ್ರಿಯವರು ಕೈಗೊಂಡಿದ್ದಾರೆ ಮಂತ್ರಿಯಾಗಬೇಕೆಂಬ ಆಸೆ ಶಾಸಕರಲ್ಲಿರುವುದು ಸ್ವಾಭಾವಿಕ ರಾಜ್ಯದ ಆಡಳಿತ ಚೆನ್ನಾಗಿ ನಡೆದು ಜನತಾ ಪಕ್ಷಕ್ಕೆ ಉತ್ತಮ ಹೆಸರು ತರಬೇಕೆಂಬ ಆಸೆ ನಾಯಕರಲ್ಲಿರಬಹುದು. ರಾಷ್ಟ್ರದಲ್ಲಿ ಜನತಾ ಸರಕಾರವಿರುವುದು ಈ ರಾಜ್ಯದಲ್ಲೊಂದೇ ಎಂಬುವನ್ನು ಗಮನಿಸಿದರೆ ಇದನ್ನು ಉಳಿಸಬೇಕೆಂದು ಅವರ ನಾಯಕರಲ್ಲಿರುವುದು ನ್ಯಾಯವಾದದ್ದೇ. ಇದನ್ನು ಗಮನದಲ್ಲಿಟ್ಟುಕೊಂಡೇ ಮಂತ್ರಿ ಮಂಡಲದ ಪುನಃರಚನೆ ಮಾಡಲು ಅದನ್ನು ವಿಸ್ತರಿಸಲು ಮುಖ್ಯಮಂತ್ರಿಯವರು ಹೊರಟ್ಟಿದ್ದಾರೆ. ಇದಕ್ಕೆ ಕೆಲ ಶಾಸಕರು ಸಭೆಯನ್ನು ಕರೆದು ಅದರಲ್ಲಿ ಎಲ್ಲ ಮಂತ್ರಿಗಳೂ ರಾಜಿನಾಮೆ ಕೊಡಬೇಕೆಂದು ತೀರ್ಮಾನ ಮಾಡಿದ್ದು ಮತ್ತು ನಂತರ ಎಲ್ಲ ಮಂತ್ರಿಗಳೂ ರಾಜಿನಾಮೆಯನ್ನು ಮುಖ್ಯಮಂತ್ರಿಯವರಿಗೆ ಕೊಟ್ಟಿದ್ದು ಸಾಮಾನ್ಯ ಜನರಲ್ಲಿ ಗೊಂದಲಕ್ಕೆ ಅವಕಾಶ ಕೊಟ್ಟಿದೆ. ಮಂತ್ರಿಮಂಡಲದ ರಚನೆ ಮತ್ತು ಅದರಲ್ಲಿ ಬೇಕಾದಾಗ ಬದಲಾವಣೆಯನ್ನಾಗಲಿ ಅಥವಾ ವಿಸ್ತರಣೆಯನ್ನಾಗಲಿ ಮಾಡುವ ಅಧಿಕಾರ ಮುಖ್ಯಮಂತ್ರಿಯವರಿಗೆ ಇದೆ. ಇದನ್ನು ಮಾಡಲು ರಾಜಿನಾಮೆ ಕೇಳಿಕೊಳ್ಳುವ ಅವಶ್ಯಕತೆ ಏನಿತ್ತೆಂಬುದು ಗೊತ್ತಾಗಿಲ್ಲ. ಇದು ನಡೆದು ಹಲವು ದಿನ ಕಳೆದರೂ ಇನ್ನೂ ಅಂತಿಮ ತೀರ್ಮಾನಕ್ಕೆ ಮುಖ್ಯಮಂತ್ರಿಗಳು ಬಾರದಿರುವುದು ಆಶ್ಚರ್ಯವಾಗಿದೆ. ಇದು ಅನೇಕ ಊಹಾಪೋಹಗಳಿಗೆ ಅವಕಾಶ ಕೊಟ್ಟಿದೆ. ಈ ಸಂದರ್ಭದಲ್ಲಿ ಸೇಟ್ ಮತ್ತು ಚಂದ್ರ ಪ್ರಭಾ ರವರ ರಾಜಿನಾಮೆಯು ಶತ್ರುಗಳಿಗೆ ಸರಕಾರದ ವಿರುದ್ಧ ಪ್ರಚಾರ ಮಾಡಲು ಅವಕಾಶ ಕೊಟ್ಟಿದೆ.

ಭಾ.ಜ.ಪ. ದ ದ್ವಿಮುಖ ಧೋರಣೆ

ಸರ್ಕಾರಕ್ಕೆ ಬೆಂಬಲ ನೀಡುತ್ತಿರುವ ಭಾ. ಜ. ಪಕ್ಷವು ಇತ್ತೀಚಿಗೆ ದ್ವಿಮುಖ ಧೋರಣೆಯನ್ನನುಸರಿಸಲು ಆರಂಭಿ

(8ನೇ ಪುಟ ನೋಡಿ)

ಚಂದ್ರಪ್ರಭಾ – ಅಜೀಜ್ ಸೇಠ್ ರಾಜೀನಾಮೆ

ಜನತೆಗೆ ಬಗೆದ ದ್ರೋಹ

ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ತಮ್ಮ ಸಚಿವ ಸಂಪುಟವನ್ನು ಪುನರ್ ರಚಿಸುವ ಹಿನ್ನೆಲೆಯಲ್ಲಿ ಸಚಿವರುಗಳು ರಾಜಿನಾಮೆ ಇತ್ತಿರುವುದು ಸರಿಯಷ್ಟೆ. ಸಮಯ ಕಾದು ಇದ್ದಕ್ಕಿದ್ದ ಹಾಗೆ ಕಾರ್ಮಿಕ ಸಚಿವರಾದ ಶ್ರೀ ಅಜೀಜ್ ಸೇಠ್ ರವರು ಮತ್ತು ಸಮಾಜ ಕಲ್ಯಾಣ ಸಚಿವ ಶ್ರೀ ಚಂದ್ರ ಪ್ರಭಾ ಅರಸು ರವರುಕ್ಕುಂಟುನೆಸಗಳನ್ನೊಡ್ಡಿ ಇತ್ತಿರುವ ರಾಜೀನಾಮೆಯು ಕಾಂಗ್ರೆಸ್ [ಐ] ಪಕ್ಷದ ಜನತಾ ಸರ್ಕಾರವನ್ನು ಉರುಳಿಸುವ ಆಟಕ್ಕೆ ಪೂರಕವಾಗಿರುವುದೆಂದು ಜನತೆ ಅರ್ಥಮಾಡಿಕೊಳ್ಳಬಲ್ಲರು ಎಂಬುದಾಗಿ ವಿಧಾನ ಸಭೆಯ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಾಸಕಾಂಗ ಗುಂಪಿನ ಮುಖಂಡರಾದ, ಕಾ. ಎಸ್. ಸೂರ್ಯನಾರಾಯಣರಾವ್ ರವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದಿವಂಗತ ದೇವರಾಜ ಅರಸ್ ರವರು ಸರ್ವಾಧಿಕಾರಿ ಶಕ್ತಿಗಳನ್ನು ಪ್ರತಿನಿಧಿಸುವ ಕಾಂಗ್ರೆಸ್ [ಐ] ಪಕ್ಷದ ನೀತಿಯನ್ನು ತೀವ್ರವಾಗಿ ವಿರೋಧಿಸಬೇಕೆಂದು ಬಯಸಿದ್ದರು. ಈ ಬಯಕೆಗೆ ವಿರುದ್ಧವಾಗಿ ಶ್ರೀಮತಿ ಚಂದ್ರ ಪ್ರಭಾ ಅರಸ್ ರವರು ರಾಜೀನಾಮೆ ಇತ್ತಿದ್ದಾರೆ.

ಅಜೀಜ್ ಸೇಠ್ ರವರ ಕಾರ್ಮಿಕವರ್ಗದ ವಿರೋಧಿ ನೀತಿಗೋಸ್ಕರ ಅವರನ್ನು ಮಂತ್ರಿ ಪದವಿಯಿಂದ ತೆಗೆಯ ಬೇಕೆಂದು ಮುಖ್ಯಮಂತ್ರಿಗಳನ್ನು ಕಾರ್ಮಿಕ ಸಂಘಟನೆಗಳು ಒತ್ತಾಯಿಸುತ್ತಲೇ ಇದ್ದವು. ಆದ್ದರಿಂದ ಅಜೀಜ್ ಸೇಠ್ ರವರ ರಾಜೀನಾಮೆ ಕಾರ್ಮಿಕ ವರ್ಗದಲ್ಲಿ ಅಸಂತೋಷವನ್ನೇನೂ ಉಂಟುಮಾಡಿರುವುದಿಲ್ಲ.

ಅಲ್ಪಸಂಖ್ಯಾತರ, ಪರಿಶಿಷ್ಟಜಾತಿ, ವರ್ಗ, ಮತ್ತು ಹಿಂದುಳಿದ ವರ್ಗಗಳ ನ್ಯಾಯಬದ್ಧ ಆಶೋತ್ತರಗಳನ್ನು ಮತ್ತು ರೈತ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಜನತಾ ಸರ್ಕಾರ ದೃಢ ಕ್ರಮ ತೆಗೆದುಕೊಳ್ಳಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸರ್ಕಾರವನ್ನು ಒತ್ತಾಯಿಸುತ್ತದೆ. ಅದೇ ಸಮಯದಲ್ಲಿ ಭಾರತೀಯ ಜನತಾ ಪಕ್ಷದ ಬೆದರಿಕೆಗಳಿಗೆ ಜನತಾ ಸರ್ಕಾರವು ಬಲಿಯಾಗದೆ ಜಾತೀವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಎಚ್ಚರಿಸುತ್ತದೆ.

ಕಾಂಗ್ರೆಸ್ (ಐ) ಪಕ್ಷವು ಜನತಾ ಸರ್ಕಾರವನ್ನು ಉರುಳಿಸುವ ಕುತಂತ್ರಗಳ ಬಗ್ಗೆ ಕರ್ನಾಟಕದ ಜನತೆ ಎಚ್ಚರವಾಗಿರಬೇಕೆಂದು ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸ ಬೇಕೆಂದು ಕರೆ ಕೊಡುತ್ತದೆ.

‘ಸಿ. ಐ. ಟಿ. ಯು. ಪತ್ರಿಕೆ’

ಆಗಸ್ಟ್ 3 ರಂದು ಪ್ರಥಮ ಮಾದರಿ ಸಂಚಿಕೆ ಬಿಡುಗಡೆಯಾಗಿದೆ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್‌ನ ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆಯ ಪ್ರಥಮ ಮಾದರಿ ಸಂಚಿಕೆ 1984 ರ ಆಗಸ್ಟ್ 3 ರಂದು ಬಿಡುಗಡೆಯಾಗಿದೆಯೆಂದು ತಿಳಿಸಲು ಹರ್ಷಿಸುತ್ತೇವೆ.

ಪತ್ರಿಕೆಗಾಗಿ ಇನ್ನೂ ಹಣವನ್ನು ಕಳುಹಿಸದೇ ಇರುವವರು ಕೆಳಕಂಡ ವಿಳಾಸಕ್ಕೆ ಮನಿಆರ್ಡರ್ ಮೂಲಕ ಹಣವನ್ನು ಕಳುಹಿಸಬೇಕೆಂದು ಕೋರಲಾಗಿದೆ.

ಸಂಪಾದಕರು
‘ಸಿ. ಐ. ಟಿ. ಯು. ಪತ್ರಿಕೆ’
ಎ. ಕೃಷ್ಣಶೆಟ್ಟಿ ಮೆಮೋರಿಯಲ್ ಪ್ರೆಸ್,
ಎಮ್ಮೆಕೆರೆ ಕ್ರಾಸ್, ಬೋಳಾರ,
ಮಂಗಳೂರು.

— ಎನ್ಕೆ

ಕರ್ನಾಟಕ ರಾಜ್ಯದಲ್ಲಿ

ಸರ್ಕಾರದ ಪತನಕ್ಕೆ ಸಹಾಯಕವಾಗುತ್ತಿರುವ ಸಂಗತಿಗಳು

ಬೆಂಗಳೂರು ನಗರ ಕಾರ್ಪೋರೇಶನಿನಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಇಬ್ಬರು ಸದಸ್ಯರನ್ನು ಆರಿಸುವ ಕಾರ್ಯದಲ್ಲಿ ಬಿ.ಜೆ.ಪಿ.ಗೆ ಕಾಂಗ್ರೆ ಬೆಂಬಲ ನೀಡಿ ಜನತಾ ಪ್ರತಿನಿಧಿಗಳು ಸೋಲುವಂತೆ ಮಾಡಿವೆಯಂತೆ. ಕರ್ನಾಟಕದ ಗೊಂದಲಮಯ ರಾಜಕಾರಣದಲ್ಲಿ ಅದಕ್ಕೊಂದು ವೈಶಿಷ್ಟ್ಯವಿದೆಂದೇ ಹೇಳಬೇಕಾಗಿದೆ.

ಕೆಲವು ತಿಂಗಳ ಹಿಂದೆ ಕಾರ್ಪೋರೇಶನ್-ನಗರ ಸಭೆಗಳ ಚುನಾವಣೆ ನಡೆದಾಗ, ಜನತಾದವರು ಕಾಂಗ್ರೆಗೆ ಸಹಾಯ ಮಾಡಿದ್ದರೆಂದು ಬಿ.ಜೆ.ಪಿ. ಆರೋಪ ಹೊರಿಸುತ್ತ ಬಂದಿದೆ. ಹಲವಾರು ಕಮಿಟಿಗಳಲ್ಲಿ ಕಾಂಗ್ರೆಸ್ಸಿನವರಿಗೆ ಸ್ಥಾನ ಒದಗಿಸಿಕೊಟ್ಟಿರುವ ಜನತಾ ಮುಖಂಡರು ಬಿ.ಜೆ.ಪಿ. ಯ ಆರೋಪವನ್ನು ಅಲ್ಲಗಳೆಯಲು ಮುಂದಾಗಿಲ್ಲ. ತನ್ನನ್ನ ಸೋಲಿಸಲು ಕಾಂಗ್ರೆಸ್ಸು ಬಿ.ಜೆ.ಪಿ. ಯನ್ನುಪಯೋಗಿಸುತ್ತದೆಂಬ ತಿಳುವಳಿಕೆ ಜನತಾ ಮುಖಂಡರಿಗಿರುವುದೇ ಇದಕ್ಕೆ ಕಾರಣ. ರೈತ ಸಂಘದ ಕಾರ್ಯದರ್ಶಿ ಜಗನ್ನಾಥರಂಥವರನ್ನು ಭೂ ಪಂಚಾಯತಿ ಕಮಿಟಿಗಳಿಂದ (ಯಾರೂ ಹೇಳದೆ ಅವರನ್ನು ಕಮಿಟಿಯಲ್ಲಿ ಸೇರಿಸಲಾಗಿತ್ತು. ಈಗ ಯಾರೋ ಹೇಳಿ ಅವರ ಹೆಸರನ್ನು ಕಡಿಮೆ ಮಾಡಿ ಕಾಂಗ್ರೆ ಪರ ವ್ಯಕ್ತಿಯನ್ನು ತುಂಬಲಾಗಿದೆ. ಇದು ಬೆಂಗಳೂರು ತಾಲೂಕಿನ ಕತೆ) ಕಡಿಮೆ ಮಾಡಿ ಕಾಂಗ್ರೆ ಪರ ವ್ಯಕ್ತಿಗಳನ್ನು ತುಂಬಿದ್ದಾರೆ. ನಿರ್ದಿಷ್ಟ ನಿರೂಪಣೆಗಳಿಲ್ಲದ ಜನತಾ ಸ್ಥಳೀಯ ಒತ್ತಡಕ್ಕೆ ಬಲಿಯಾಗಿ ಕಾಂಗ್ರೆ ಪರರಿಗೆ ಕಮಿಟಿಗಳಲ್ಲಿ ಸ್ಥಾನ ಒದಗಿಸುತ್ತಿರುವುದನ್ನು ಕಂಡೇ ಯಾರಾದರೂ ರಾಜೀನಾಮೆ ಕೊಟ್ಟ, ಖಾಲಿ ಇರುವ ಸ್ಥಾನಗಳಲ್ಲೆಲ್ಲ ತಮ್ಮವರನ್ನೇ ನೇಮಿಸಬೇಕೆಂಬ ಕರಾರನ್ನು ಬಿಜೆಪಿ ಹಾಕಿದೆ. ಎಂಥ ಅಂತರ್ಲಾಗವನ್ನು ಹಾಕಲೂ ಹೇಸದ ಬಂಡವಳಶಾಹಿ ರಾಜಕೀಯ ಪಕ್ಷಗಳ ಸ್ಥಿತಿಗತಿ ಇದಾಗಿದೆ. ಅವರಿಗೆ ಸಿದ್ಧಾಂತದ ಪ್ರಶ್ನೆ ಎಂಬುದೇ ಇಲ್ಲ. ಏನಕೇನ ಪ ಕರೇಣ ಅಧಿಕಾರಗಳಿಸುವುದೊಂದೇ ಅವರ ಗುರಿ. ಜನತಾ ಸರಕಾರದ ಮೇಲೆ ಹುಸಿ ಗುಂಡು ಹಾರಿಸುತ್ತಿರುವ ಬಿಜೆಪಿಯು "ಅನ್ಯತ ಹಸ್ತದಿಂದ" ಹೆಗಡೆ ಸರಕಾರ ಉರುಳಿಸುವ "ಬರಿಗುಂಡು" ಹಾರಿಸಬಹುದೇ ಎಂಬ ರಂಗತಾಲೀಮನ್ನು ಕಾರ್ಪೋರೇಶ್‌ನ ಕಾಂಗ್ರೆ ಪಕ್ಷ ಆಡಿ ತೋರಿಸಿದೆಯಷ್ಟೆ. ಜನತಾ ಪಕ್ಷ ತನ್ನ ಬುದ್ಧಿಗೇಡಿತನದಿಂದ ಗುಂಡು ಹಾಕಿಸಿ ಕೊಳ್ಳುವುದೇ ? ಪರೀಕ್ಷಿಸಿ ನೋಡಬೇಕಾದ ಪ್ರಶ್ನೆ.

ಕಾಂಗ್ರೆ ಎಂ. ಪಿ. ಗಳ ಅಸಮರ್ಥನೀಯ ವರ್ತನೆ

ಲೋಕಸಭೆ, ವಿಧಾನಸಭೆ ಸದಸ್ಯರೆಲ್ಲ ತಂತಮ್ಮ ಮತಕ್ಷೇತ್ರದ ಹಾಗೆಯೇ ಸಮಗ್ರ ರಾಜ್ಯದ ಪ್ರತಿನಿಧಿಗಳು. ಅವರು ಯಾವ ಪಕ್ಷದವರೇ ಆಗಲಿ ರಾಜ್ಯದ-ಜನತೆಯ ಸಮಸ್ಯೆಗಳನ್ನು ಅಭ್ಯಸಿಸಿ ಅವುಗಳಿಗೆ ಪರಿಹಾರ ಕಂಡು ಹಿಡಿಯಲೇ ಬೇಕಾಗುತ್ತದೆ. ಚುನಾವಣೆಯ ಫಲಿತಾಂಶ ಪ್ರಕಟವಾದ ನಂತರ "ನಮ್ಮವರು-ನಿಮ್ಮವರು" ಎಂಬ ಪ್ರಶ್ನೆ ಬರಬಾರದು. ಅಭಿವೃದ್ಧಿ ಕಾರ್ಯಗಳು ಮುಂದೆ ಸಾಗಬೇಕು.

ಕಾಂಗ್ರೆಸ್ ಆಳ್ವಿಕೆಯಲ್ಲಿಯೂ, ಈಗಿನ ಜನತಾ ಸರಕಾರದ ಕಾಲವಧಿಯಲ್ಲಿಯೂ ಕರ್ನಾಟಕದ ಮಟ್ಟಿಗೆ ಕೇಂದ್ರ ಸರಕಾರ ಮಲತಾಯಿಧೋರಣೆ ಅನುಸರಿಸುತ್ತಲೇ ಬಂದಿದೆ. ಹಾಗೆ ನೋಡಿದರೆ ಕಾಂಗ್ರೆಸ್ ಅನುಸರಿಸುತ್ತಿರುವ ವಿದೇಶಿ ಬಹುರಾಷ್ಟ್ರೀಯ ಗುತ್ತೇದಾರಿ ಬಂಡವಲದಾರರ, ದೇಶಿ ಗುತ್ತೇದಾರಿಗಳ ಪರವಾದ ಆರ್ಥಿಕ ಧೋರಣೆ, ಮತದಾರರಿಗೆ ಮಂಕುಬೂದಿ ಹಚ್ಚಿ ಮತಗಳಿಸುವ ತಂತ್ರಗಳಿಂದಾಗಿ ದೇಶದ ಬಹುಭಾಗ ಕಡೆಗಣಿಸಲ್ಪಟ್ಟಿದೆ. ಪ್ರಕೃತಿಯ ಸಂಪತ್ತನ್ನು ಜನಸಾಮಾನ್ಯರಿಗೆ ಒದಗಿಸುವಲ್ಲಿ ಕಾಂಗ್ರೆಸ್ ಸರಕಾರದ ಧೋರಣೆ ವಿಫಲಗೊಂಡಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ ಪಕ್ಷ, ಪಶ್ಚಿಮ ಬಂಗಾಲದ ಸಿಪಿಐ(ಎಂ) ಮುಖಂಡತ್ವದ ಎಡರಂಗ ಸರಕಾರ ಹಾಗೆಯೇ ಇತ್ತೀಚೆಗೆ ಕಾಂಗ್ರೆಯೇತರ ಎಲ್ಲ ರಾಜ್ಯ ಸರಕಾರಗಳ ಮುಖ್ಯಮಂತ್ರಿಗಳೆಲ್ಲ ರಾಜ್ಯಗಳಿಗೆ ನ್ಯಾಯ ಕೊಡಿಸುವ ದೃಷ್ಟಿಯಲ್ಲಿ ಯೋಜನೆಯಲ್ಲಿ ಮೂಲಭೂತ ಬದಲಾವಣೆಗಳಾಗಬೇಕು, ಕೇಂದ್ರದ ಸಂಪನ್ಮೂಲಗಳಿಂದ ರಾಜ್ಯಗಳಿಗೆ ಹೆಚ್ಚಿನ ಧನ ಸಹಾಯ ದೊರೆಯುವಂತಾಗಬೇಕೆಂದು ಒತ್ತಾಯ ಮಾಡುತ್ತಲೇ ಬಂದಿದ್ದಾರೆ.

ರೇಲ್ವೆ, ನೀರಾವರಿಯೋಜನೆ, ಕೈಗಾರಿಕೆಗಳ ಸ್ಥಾಪನೆ, ಶಿಕ್ಷಣ ಕ್ಷೇತ್ರಗಳಲ್ಲೆಲ್ಲ ಅಪಾರ ಅನ್ಯಾಯವಾಗಿದೆಂದು ಕೇಂದ್ರ ಮಂತ್ರಿ ಜಾಫರ್ ಶರೀಫ್‌ರಂತವರೇ ಒಪ್ಪಿಕೊಳ್ಳುತ್ತಾರೆ. ಬರಗಾಲ, ಅತಿ ವೃಷ್ಟಿಗಳಿಂದುಂಟಾಗುತ್ತಿರುವ ಹಾನಿಗೆ ನ್ಯಾಯಯುತ ಪರಿಹಾರ ಸಕಾಲದಲ್ಲಿ ಒದಗದಂತಾಗಿದೆಂಬ ಸಂಗತಿ ಎಲ್ಲರಿಗೂ ಗೊತ್ತು.

ಈ ಎಲ್ಲ ಕಾರಣಗಳಿಂದ ಲೋಕಸಭೆಯ ಅಧಿವೇಶನ ಸೇರುವ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿಗಳ ಜೊತೆಯಲ್ಲಿ ಆ ರಾಜ್ಯದಿಂದ ಆರಿಸಿ ಬಂದ ಲೋಕಸಭೆ ಸದಸ್ಯರು ವಿಚಾರ ವಿನಿಮಯ ಮಾಡಿದರೆ ರಾಜ್ಯದ ಸಮಗ್ರ ಸಮಸ್ಯೆಗಳನ್ನು ಲೋಕಸಭೆಯಲ್ಲಿ ಮಂಡಿಸಲು ಸಹಾಯವಾಗುತ್ತದೆ ಆ ಕಾರಣದಿಂದಲೇ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಕರ್ನಾಟಕ ರಾಜ್ಯದ ಎಲ್ಲ ಲೋಕಸಭೆ ಸದಸ್ಯರ ಸಭೆ ಕರೆದಿದ್ದರು. ಕಾಂಗ್ರೆ ಎಂ. ಪಿ. ಗಳು ಸಭೆಯಲ್ಲಿ ಹಾಜರಾಗಿ ಅನಂತರ ಸಭಾತ್ಯಾಗ ಮಾಡಿದರು. ಇತ್ತೀಚೆಗೆ ನಡೆದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಿಂದ ನಾಲ್ಕು ಮಂದಿ ಕಾಂಗ್ರೆಯೇತರ ರಾಜ್ಯಗಳ ಮುಖ್ಯಮಂತ್ರಿಗಳು- ಅದರಲ್ಲಿ ರಾಮಕೃಷ್ಣ ಹೆಗಡೆಯವರೊಬ್ಬರು-ಸಭಾತ್ಯಾಗ ಮಾಡಿದ್ದಕ್ಕೆ ಪ್ರತೀಕಾರವಾಗಿ ಇಂಥ ಕ್ರಮ ಕೈಗೊಳ್ಳಲಾಯಿತಂತೆ.

ಇಂದಿರಾ ಸರಕಾರ ಸಂವಿಧಾನ ವಿರೋಧಿ ಕ್ರಮದಿಂದ ಜಮ್ಮು-ಕಾಶ್ಮೀರ ಸರಕಾರವನ್ನು ವಿಸರ್ಜಿಸಿರುವುದನ್ನು ಪ್ರತಿಭಟಿಸಲು ಕಾಂಗ್ರೆಯೇತರ ಮುಖ್ಯಮಂತ್ರಿಗಳು ಅಂಥ ಕ್ರಮ ಅನುಸರಿಸಬೇಕಾಯಿತು. ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ಭಾಷಣಗಳಿಗೆ ಪ್ರಾಧಾನ್ಯತೆಯಲ್ಲದೆ, ಚರ್ಚೆಗೆ ಅವಕಾಶವಿಲ್ಲೆಂಬ ಸಂಗತಿ ಕಾಂಗ್ರೆ ಎಂ. ಪಿ. ಗಳಿಗೆ ತಿಳಿದಂತೆ ಕಂಡು ಬರುವುದಿಲ್ಲ ಮುಖ್ಯಮಂತ್ರಿಗಳು ತಮ್ಮ ಭಾಷಣಗಳ ಲಿಖಿತ ಪ್ರತಿಗಳನು ಮುಂಚೆಯೇ ಒಪ್ಪಿಸಿರುತ್ತಾರೆ. ಕಾರಣ ಅವರೆಲ್ಲ ಸಭೆಯಲ್ಲಿ ಹಾಜರಿರದಿದ್ದರೂ ಆ ರಾಜ್ಯಕ್ಕೆ ಹಾನಿ ಉಂಟಾಗುವುದಿಲ್ಲ. ಆದರೆ ಲೋಕಸಭೆಯ ಚರ್ಚೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಬೇಕಾದರೆ ಕರ್ನಾಟಕ ರಾಜ್ಯದ ಸಮಸ್ಯೆಗಳ ಆಳ ಅಭ್ಯಾಸ ಎಂ. ಪಿ. ಗಳಿಗೆ ಅತ್ಯಗತ್ಯ. ಆದರೆ ಇಂದಿರಾ ಹೆಸರಲ್ಲೇ ಆರಿಸಿ ಬರುವ ಅದೃಷ್ಟ ಹೊಂದಿದ ಎಂ. ಪಿ ಗಳಿಗೆ ಜನಸಾಮಾನ್ಯರಿಗೆ ಒಳಿತು ಮಾಡುವ ಅವಶ್ಯಕತೆ ಇಲ್ಲವೇ ಇಲ್ಲ. ಆದ್ದರಿಂದಲೇ ಹೆಗಡೆ ಕರೆದ ಸಭೆಗೆ ಕಾಂಗ್ರೆ ಎಂ.ಪಿ.ಗಳ ಬಹಿಷ್ಕಾರ.

ಚಂದ್ರ ಪ್ರಭಾ - ಅಜೀಜ್ ಸೇಠ್‌ರ ಅಂತರ್ಲಾಗ

ತನ್ನ ಇಡೀ ಜೀವನವನ್ನೇ ಸ್ವಾರ್ಥಕ್ಕಾಗಿ ಮೀಸಲಾಗಿಟ್ಟ ಅಜೀಜ್ ಶೇಠ್ ಮತ್ತು ಚಂದ್ರ ಪ್ರಭಾ ಅರಸರು ಜನತಾ ಪಕ್ಷದಲ್ಲಿ ಸಮಸ್ಯೆಗಳಾಗಿವೆಂದು ಹೋದವಾರ ಹೇಳಿದ್ದೆ. ಬಂಡವಾಳಶಾಹಿ ಪಕ್ಷಗಳಲ್ಲಿ "ಷಾ" ಗಳು ಹುಟ್ಟಿಕೊಳ್ಳುವುದರಲ್ಲೇನೂ ಆಶ್ಚರ್ಯವಿಲ್ಲೆಂದೂ ಹೇಳಿದ್ದೆ. ಅಜೀಜ್ ಶೇಠರಿಗೆ ಸಂಪನ್ಮೂಲ "ಟ್ರಾನ್ಸ್‌ಪೋರ್ಟ್" ಖಾತೆಯೂ, ಚಂದ್ರ ಪ್ರಭಾ ಅರಸ ರಿಗೆ "ಎಕ್ಸೈಸ್" ಖಾತೆಯೂ ಬೇಕಾಗಿತ್ತು. ಹಣ ಗಳಿಸಲು ಆ ಖಾತೆಗಳು ದೊರಕಲಾರದಾದಾಗ "ಹಿಂದುಳಿದವರ" "ಅಲ್ಪ ಮತಸ್ಥರ" ನೆನಪಾಯಿತು ಈ ದೇವತೆಗಳಿಗೆ. ಕಾಂಗ್ರೆ ಅಥವಾ ಜನತಾ ಪಕ್ಷದಲ್ಲಿಯ ಹಿಂದುಳಿದ ಯಾವ ಮಂತ್ರಿಯಾಗಲೀ, ಆ ಸರಕಾರದ ಯಾವ ಹಿಂದುಳಿದ ಅಧಿಕಾರಿಯಾಗಲೀ ಹಿಂದುಳಿದವರ ಸೇವೆ ಮಾಡಿಲ್ಲ. ಅಧಿಕಾರ ಸ್ಥಾನದಲ್ಲಿದ್ದು "ಮುಂದುವರಿದವರಂತೆಯೇ" ವರ್ತಿಸಿದ್ದಾರೆ. ಆದ್ದರಿಂದ ತಮ್ಮ ಸ್ವಾರ್ಥ ಸಾಧನೆಗೆ ಹಿಂದುಳಿದವರ ಹಿತ ರಕ್ಷಣೆಯ ಮಂತ್ರವನ್ನು ಉಪಯೋಗಿಸಲಾಗುತ್ತಿದೆ.

ಸೋಶಲಿಸ್ಟ ಪಕ್ಷದಿಂದ ಕಾಂಗ್ರೆಸ್ಸಿಗೆ, ಅದರಿಂದ ಅರಸ್ ಪಕ್ಷಕ್ಕೆ, ಮತ್ತೆ ಜನತಾಕ್ಕೆ ಹೀಗೆ ಜಿಗಿಯುವ ವಾನರ ಚಟದ ಅಜೀಜ್ ಶೇಠರಿಗೆ ಅಲ್ಪಮತಸ್ಥರ ಕುರಿತು ಎಷ್ಟು ಪ್ರೇಮ ವಿಶ್ವಾಸವಿದೆಂದು ಎಲ್ಲರಿಗೂ ಗೊತ್ತು. ಇಂಥವರನ್ನು ಗಲ್ಲಿಗೇರಿಸುವುದೊಂದೇ ಉಳಿದಿದೆ.

ದೇವರಾಜ ಅರಸರ ಮಗಳೆಂಬುದೊಂದೇ ಚಂದ್ರ ಪ್ರಭಾಳಿಗೆ "ಡಿಗ್ರಿ" ಯಲ್ಲದೆ ಮತ್ತೇನಿದೆ ? ತನ್ನಪ್ಪನ ಜೀವಂತ ಗೋರಿಗೆ ಇಂದಿರಾಗಾಂಧಿಯ ಹೊಲಸು ರಾಜಕಾರಣವೇ ಕಾರಣವೆಂದು ಚಂದ್ರ ಪ್ರಭಾಗೆ ಚೆನ್ನಾಗಿ ತಿಳಿದಿರಬೇಕು. 1983ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆ ವಿರುದ್ಧ ಸ್ಪರ್ಧಿಸಿದ್ದ ಈ ಅರಸ್ ಮಗಳಿಗೆ ಜನತೆ ಅತಿ ಹೆಚ್ಚು ಮತ ನೀಡಿ ಆರಿಸಿ ತಂದಿದ್ದರು. ತಾನು ಆರಿಸಿ ಬಂದ ಹದಿನೆಂಟು ತಿಂಗಳಲ್ಲೇ ತನ್ನಪ್ಪನಿಗೆ ದ್ರೋಹ ಬಗೆಯುತ್ತಾಳೆಂಬ ಎಳೆಯಷ್ಟು ಅರಿವೂ ಮತದಾರರಿಗಿರುತ್ತಿದ್ದರೆ ಈ ಮಗಳಿಗೆ ಮತ ನೀಡುತ್ತಿರಲಿಲ್ಲ. ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದಿರಿ ಪಾದ ಅವರು ಹುಣಸೂರಲ್ಲಿ, ಚಂದ್ರ ಪ್ರಭಾಳ ಸಲುವಾಗಿ ಚುನಾವಣ ಪ್ರಚಾರ ಭಾಷಣ ಮಾಡಿದ್ದರು. ಕಾಂಗ್ರೆಸ್ ವಿರೋಧವಾದ ಅಪಾರ ಜನಸ್ತೋಮ ಕಂಡು ಆನಂದ ಪಟ್ಟಿದ್ದರು. ಚಂದ್ರ ಪ್ರಭಾಳ ಮೋಸಗಾರಿಕೆ ಎಲ್ಲರಿಗೂ ಬೇಸರ ಉಂಟುಮಾಡುವುದರಲ್ಲಿ ಸಂಶಯವಿಲ್ಲ.

ಚಂದ್ರಪ್ರಭಾ - ಅಜೀಜ್ ಶೇಠರ ಪ್ರಕರಣಗಳು ರಾಜ್ಯದ ಪ್ರಜಾಪ್ರಭುತ್ವ ಚಳುವಳಿಗೆ ಸವಾಲನ್ನೊಡ್ಡಿವೆ. ಇಂಥ ಸವಾಲನ್ನೆದುರಿಸಿಯೇ ಅಜೀಜ್ ಶೇಠರಂತಹವರು ರಾಜ್ಯ ಮಟ್ಟದ ರಾಜಕಾರಣ ಬಿಟ್ಟು ಕಾಂಗ್ರೆ ಟಿಕೇಟಿನಲ್ಲಿ ಲೋಕ ಸಭೆಗೆ ಸ್ಪರ್ಧಿಸಿ ಕೇಂದ್ರದಲ್ಲಿ ಮಂತ್ರಿಸ್ಥಾನ ಗಿಟ್ಟಿಸುವ ಹವಣಿಕೆಯಲ್ಲಿದ್ದಾರಂತೆ. ಅದು ಸಾಧಿಸದಿದ್ದಲ್ಲಿ ಕರ್ನಾಟಕದ "ಷಾ" ಆಗಿ ಮುಖ್ಯಮಂತ್ರಿ ಸ್ಥಾನವನ್ನು ಒಪ್ಪಿಸುವ ದಾನಶೂರ ನೀತಿಯನ್ನೂ ಕಾಂಗ್ರೆಗಳು ಅನುಸರಿಸಲೂ ಸಿದ್ಧವೆಂಬ ದಟ್ಟ ಸುದ್ದಿ ಹಬ್ಬಿದೆ. ಎರಡೂ ಕಮ್ಯೂನಿಸ್ಟ ಪಕ್ಷ, ಅವುಗಳ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆ, ಜನತಾ ಮತ್ತು ಇತರ ಪ್ರಜಾಪ್ರಭುತ್ವ ಶಕ್ತಿಗಳಿಗೆ, ಕರ್ನಾಟಕದ ಜಾಗೃತ ಜನತೆಗೆ ಈ ಮಂತ್ರಿಗಳಿಬ್ಬರೂ ಸವಾಲೊಡ್ಡಿದ್ದಾರೆ. ಆ ಸವಾಲನ್ನೆದುರಿಸಲಿಕ್ಕೆ ನಾವೆಲ್ಲರೂ ಸಿದ್ಧರಾಗೋಣ.

★

ಅಂಬಲಗದಲ್ಲಿ ಎಸ್.ಎಫ್.ಐ. ಘಟಕದ ಉದ್ಘಾಟನೆ

ತಾ. 17-7-84 ರಂದು ಇಲ್ಲಿನ ರೈತ ಸಂಘದ ಕಛೇರಿಯಲ್ಲಿ ನಡೆದ ವಿದ್ಯಾರ್ಥಿಗಳ ಸಭೆಯಲ್ಲಿ ಎಸ್. ಎಫ್. ಐ. ನ ಘಟಕವೊಂದನ್ನು ರಚಿಸಲಾಯಿತು ಸಭೆಯಲ್ಲಿ ಹಾಜರಿದ್ದ ಮಾನು, ಮೇಘರಾಜ ಕಠಾರೆ, ಕಲ್ಲಪ್ಪ ಚೇಲಿ ಅವರುಗಳು ವಿದ್ಯಾರ್ಥಿ ಸಂಘಟನೆ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು. ಸಭೆಯಲ್ಲಿ, 15 ಜನರ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಯಿತು. ಎಚ್ಚರಪ್ಪ ಎಂ. ಪಂಚಾಳ ಅಧ್ಯಕ್ಷರಾಗಿ, ಹಣಮಂತ ಬಿ. ಗುದಗಿ, ಶಿವಾನಂದ ಮೈಸಲಗಿ ಅವರುಗಳು ಉಪಾಧ್ಯಕ್ಷರುಗಳಾಗಿ, ಗುರುಸಿದ್ಧಪ್ಪ ಶಿವಶೆಟ್ಟಿ ಕಾರ್ಯದರ್ಶಿಯಾಗಿ, ಜಗನ್ನಾಥ ಕೆ. ಗುದಗಿ, ಮತ್ತು ರಸೀದ ಮಿಯಾ ಎಸ್. ಮುಲ್ಲಾ ಅವರುಗಳು ಕ್ರಮವಾಗಿ ಜಂಟಿ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿಯೂ ಆಯ್ಕೆಯಾದರು.

ದಿನಾಂಕ 24-7-84 ರಂದು ಅಂಬಲಗಾ ಪ್ರೌಢ ಶಾಲೆಯಲ್ಲಿ ಮೂರು ವರ್ಗಗಳಿಂದ ಒಬ್ಬರೇ ಶಿಕ್ಷಕರಿದ್ದುದನ್ನು ಪ್ರತಿಭಟಿಸಿ ಇನ್ನೂರು ವಿದ್ಯಾರ್ಥಿಗಳು ಎಸ್. ಎಫ್. ಐ. ನೇತೃತ್ವದಲ್ಲಿ ಜಂಟಿ ನಿರ್ದೇಶಕರ ಕಛೇರಿಯ ಮುಂದೆ ಮೂಕ ಪ್ರದರ್ಶನ ನಡೆಸಿದರು.

○

ಸಮಾನ ನಾಗರೀಕ ಸಂಹಿತೆಗಾಗಿ ಹೋರಾಟ

ಬಹುಪತ್ನಿತ್ವ, ವಿವಾಹ ವಿಚ್ಛೇದನ, ದತ್ತು ಮತ್ತು ವಾರಸುದಾರಿಕೆ ಮುಂತಾದವುಗಳನ್ನು ಒಳಗೊಂಡಂತೆ ಇಡೀ ಮುಸ್ಲಿಂ ವೈಯುಕ್ತಿಕ ಕಾನೂನನ್ನು ಸಂವಿಧಾನ ಬಾಹಿರವೆಂದು ಸಾರ ಬಾರದೇಕೆಂದು ಸಮಜಾಯಿಷಿ ಕೊಡಲು ಕೇಂದ್ರ ಸರ್ಕಾರವನ್ನು ಭಾರತ ಸರ್ವೋಚ್ಚ ನ್ಯಾಯಾಲಯ ಕೇಳಿದೆ. ಜುಲೈ 24 ರ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಈ ಸುದ್ದಿಯನ್ನು ಜಾತ್ಯಾತೀತ ಪ್ರಜಾ ಪ್ರಭುತ್ವದಲ್ಲಿ ನಂಬಿಕೆಯಿರುವವರೆಲ್ಲ ಸ್ವಾಗತಿಸುತ್ತಾರೆ.

ಮಹಾರಾಷ್ಟ್ರದ ಪುಣೆಯ ಮುಸ್ಲಿಂ ಮಹಿಳೆಯ ದಾವೆಯನ್ನು ಕೋರ್ಟಿನ ಈ ಆಜ್ಞೆಯು ಆಧರಿಸಿದೆ ಪ್ರಸ್ತುತದಲ್ಲಿರುವ ಮುಸ್ಲಿಂ ವೈಯುಕ್ತಿಕ ಕಾನೂನನ್ನು ಅನ್ವಯಿಸಿದ್ದೇ ಆದಲ್ಲಿ ಆ ಮಹಿಳೆಯ ದತ್ತಕ ಪುತ್ರ ಹಾಗೂ ಪತಿ ಆಸ್ತಿಯ ಹಕ್ಕುದಾರಿಕೆಯನ್ನು ಕಳೆದು ಕೊಳ್ಳುತ್ತಾರೆ ಏಕೆಂದರೆ ಅವರ ದತ್ತಕ ಪುತ್ರನ ಕಾನೂನಿನನ್ವಯ ಸ್ಥಾನಮಾನವನ್ನು ಮುಸ್ಲಿಂವೈಯುಕ್ತಿಕ ಕಾನೂನು ಗುರುತಿಸುವುದಿಲ್ಲ. ಪರಿಣಾಮವಾಗಿ ಅವರ ಭವಿಷ್ಯ ಅನಿಶ್ಚಯತೆಯಿಂದ ಕೂಡಿದೆ. ಕಾನೂನಿನ ಇಂತಹ ವ್ಯಾಖ್ಯೆ, ಬಹು ಪತ್ನಿತ್ವದ ಅನುಸರಣೆ ಮತ್ತು ಪತಿಯಿಂದ ಏಕಪಕ್ಷೀಯವಾದ ವಿಚ್ಛೇದನಗಳಿಂದಾಗಿ ಮಕ್ಕಳಿಲ್ಲದ ಹೆಂಡತಿಯ ಸ್ಥಾನವು ಅನಾನುಕೂಲಕರವಾಗಿ ಪರಿಣಮಿಸಿದೆ. ಸಮಾನ ನಾಗರೀಕ ಸಂಹಿತೆಯನ್ನು ರಚಿಸುವಂತೆ ಸಂವಿಧಾನದಲ್ಲಿ ನಿರ್ದೇಶನವಿದ್ದರೂ ಕೇಂದ್ರ ಸರ್ಕಾರವು ಕೇವಲ ಹಿಂದೂಗಳಿಗೆ ಅನ್ವಯಿಸುವಂತೆ ವೈಯುಕ್ತಿಕ ಕಾನೂನುಗಳನ್ನು ಮಾಡುತ್ತಾ ಮುಸ್ಲಿಂ ಮಹಿಳೆಯ ಬೆಳವಣಿಗೆಯ ವಿರುದ್ಧ ತಾರತಮ್ಯ ನೀತಿಯನ್ನು ಅನುಸರಿಸುತ್ತಿದೆ.

ವ್ಯಾಪಕ ಚರ್ಚೆ

ಮುಸ್ಲಿಂ ವೈಯುಕ್ತಿಕ ಕಾನೂನನ್ನು ಸರ್ವೋಚ್ಚ ನ್ಯಾಯಾಲಯ ವಿಚಾರಣೆಗೆ ಎತ್ತಿಕೊಂಡಿದ್ದು ಅಂತಿಮ ನಿರ್ಣಯ ಬರುವವರೆಗೆ ನಾವು ಕಾಯಬೇಕಾಗಿದೆ. ಆದರೆ ಈ ಪ್ರಶ್ನೆಯು ಕೆಲವು ಸಾಮಾಜಿಕ-ರಾಜಕೀಯ ಆಯಾಮಗಳನ್ನು ಹೊಂದಿದ್ದು ಅವುಗಳನ್ನು ವ್ಯಾಪಕವಾಗಿ ಚರ್ಚಿಸಬೇಕಾಗಿದೆ.

ಜನತಾ ಆಂದೋಳನ

ಕುಟುಂಬ, ಮದುವೆ ಮತ್ತು ವಿಚ್ಛೇದನ, ವಾರಸುದಾರಿಕೆ ಮುಂತಾದವುಗಳಿಗೆ ಸಂಬಂಧಿಸಿದ ಪ್ರಸ್ತುತ ಕಾನೂನುಗಳನ್ನು ಸುಧಾರಿಸಲು ನಡೆಯುವ ಜನತಾ ಆಂದೋಳನಗಳು ಇಂದಿನದ್ದಲ್ಲ ಹತ್ತೊಂಬತ್ತನೇ ಶತಮಾನದ ಮೊದಲ ಭಾಗದಲ್ಲೇ ಬಂಗಾಳದ ರಾಜಾರಾಮ ಮೋಹನ ರಾಯ್ ಇವುಗಳನ್ನು ಪ್ರಾರಂಭಿಸಿದರು. ಆದರೆ ಈ ಸುಧಾರಣೆಗಳು ಕೇವಲ ಹಿಂದೂ ಜನ ಸಮುದಾಯಕ್ಕೆ ಸೀಮಿತವಾಗಿದ್ದು ಅವುಗಳು ಜಾರಿಗೆ ಬರಲು ಒಂದು ಶತಮಾನಕ್ಕೂ ಹೆಚ್ಚು ಕಾಲ ಬೇಕಾಯಿತು. ಹಿಂದೂ ಸಮುದಾಯದ ಪುರೋಗಾಮಿ ವಿಭಾಗಗಳು ಬಹಳ ಕಾಲದಿಂದ ಜಾರಿಗೆ ತರಬೇಕೆಂದು ಹೋರಾಡುತ್ತಿದ್ದ ಸುಧಾರಣೆಗಳಲ್ಲಿ ಕೆಲವನ್ನು 1950 ರಲ್ಲಿ ಕೇಂದ್ರೀಯ ಕಾನೂನಿನೊಳಗೆ ಸೇರಿಸಿದರು. ಆದರೆ ಈ ಕಾನೂನು ಕೇವಲ ಹಿಂದೂ ಸಮುದಾಯಕ್ಕೆ ಸೀಮಿತಗೊಂಡಿದ್ದರಿಂದಾಗಿ ಇದನ್ನು "ಹಿಂದೂ ಸಂಹಿತೆ" ಎಂದು ಕರೆಯಲಾಯಿತು. ಈ ಸುಧಾರಣೆಗಳಿಂದ ಮುಸ್ಲಿಂ, ಕ್ರಿಶ್ಚಿಯನ್ ಮತ್ತಿನ್ನಿತರ ಸಮುದಾಯಗಳು ಹೊರಗುಳಿದು ಇಂದಿಗೂ ತಮ್ಮದೇ ವೈಯಕ್ತಿಕ ಕಾನೂನುಗಳನ್ನು ಹೊಂದಿದ್ದಾರೆ.

ಮಹಿಳೆಯ ಅಸಹಾಯಕತೆ

ಸರ್ವೋಚ್ಚ ನ್ಯಾಯಾಲಯದ ಮುಂದಿರುವ ಫಿರ್ಯಾದಿನ ವಾದಿಯು ಎತ್ತಿರುವ ಅಂಶಗಳು ಮುಸ್ಲಿಂ ಸಮುದಾಯದ ಮಹಿಳೆಯರು ಎಂತಹ ಅಸಹಾಯಕ ಪರಿಸ್ಥಿತಿಯಲ್ಲಿದ್ದಾರೆ ಎನ್ನುವುದನ್ನು ಸೂಚಿಸುತ್ತವೆ. ವಾದಿಯು ನ್ಯಾಯಾಲಯವನ್ನು ಕೋರಿರುವುದೆಂದರೆ ಹಿಂದೂ ಸಂಹಿತೆಯನ್ವಯ ಹಿಂದೂ ಸ್ತ್ರೀಗೆ ನೀಡಿರುವ ಹಕ್ಕುಗಳನ್ನು ಮುಸ್ಲಿಂ ಮಹಿಳೆಗೂ ವಿಸ್ತರಿಸಬೇಕೆಂಬುದೇ ಆಗಿದೆ.

ಅಸಾಧಾರಣ ಕೆಚ್ಚು

ನ್ಯಾಯಾಲಯದ ಮುಂದೆ ತಂದಿರುವ ಫಿರ್ಯಾದಿನ ಮೂಲಕ ಹೋರಾಡುತ್ತಿರುವ ವಾದಿ, ಆಕೆಯ ಪತಿ ಮತ್ತು ಇನ್ನಿತರ ಸಂಬಂಧಿಗಳು ಅಸಾಧಾರಣ ಧೈರ್ಯ ತೋರುತ್ತಿದ್ದಾರೆ. ಒಂದು ಶತಮಾನದ ಜನತಾ ಹೋರಾಟದ ಫಲವಾಗಿ ಇಂದಿನ ಹಿಂದೂ ಸಂಹಿತೆ ಯಶಸ್ವಿಯಾಗಿ ಜಾರಿಗೆ ಬಂದಿದ್ದು ಅಂತಹುದೇ ಹೋರಾಟ ಮುಸ್ಲಿಂ ಸಮುದಾಯದಲ್ಲಿ ಪ್ರಾರಂಭವಾಗಿರುವುದನ್ನು ಮೇಲಿನ ಅಂಶಗಳು ಸೂಚಿಸುತ್ತವೆ. ಲಕ್ಷಾಂತರ ಮಹಿಳೆಯರ ಮತ್ತು ಎಲ್ಲ ಸಮುದಾಯದ ಪುರೋಗಾಮಿ ಪುರುಷರ ಹೃದಯದಾಳದಲ್ಲಿನ ವಿಚಾರಗಳು ಸರ್ವೋಚ್ಚ ನ್ಯಾಯಾಲಯದ ಮುಂದಿರುವ ವಾದಿಯ ಬೇಡಿಕೆಯಲ್ಲಿ ಅಭಿವ್ಯಕ್ತಗೊಂಡಿವೆ.

ಮುಸ್ಲಿಂ ಸಮುದಾಯದ ಪುರೋಗಾಮಿ ವಿಭಾಗಗಳು "ಇಸ್ಲಾಂ ಅಪಾಯದಲ್ಲಿದೆ" ಎನ್ನುವ ಕೂಗಿನೊಂದಿಗೆ ಇಂತಹ ಎಲ್ಲ ಕ್ರಮಗಳಿಗೂ ತೀವ್ರ ವಿರೋಧವನ್ನು ಒಡ್ಡುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಹಿಂದೂ ಸಮುದಾಯದ ಸಂಪ್ರದಾಯವಾದಿಗಳು ಹೇಗೆ ಇಂತಹುದೇ ಪ್ರತಿರೋಧ ವ್ಯಕ್ತಪಡಿಸಿದರು ಮತ್ತು ಪ್ರಬಲವಾದ ಚಳುವಳಿಯನ್ನು ಪುರೋಗಾಮಿಗಳು ಪ್ರಾರಂಭಿಸಿದ ನಂತರ ದಾರಿ ಬಿಟ್ಟು ಕೊಟ್ಟರು ಎಂಬುದು ಚಾರಿತ್ರಿಕ ಸಂಗತಿ. ಅಂತೆಯೇ ಮುಸ್ಲಿಂ ಸಮುದಾಯದ ಪುರೋಗಾಮಿಗಳು ನ್ಯಾಯಾಲಯದ ಮುಂದಿರುವ ಅರ್ಜಿಯಲ್ಲಿಯಂತೆ ಬದಲಾವಣೆಯನ್ನು ಬಯಸಿ ಕಾರ್ಯರೂಪಕ್ಕಿಳಿದಿದ್ದಾರೆ. ಈ ಅರ್ಜಿಯಲ್ಲಿನ ಕೋರಿಕೆಯ ಬೆಂಬಲವಾಗಿ ಎಲ್ಲ ಸಮುದಾಯದ ಪುರೋಗಾಮಿಗಳು ಕ್ರಿಯಾಶೀಲರಾಗುತ್ತಾರೆಂದು ಆಶಿಸೋಣ.

ಆದಾಗ್ಯೂ ರಾಜಕೀಯ ಸ್ವರೂಪದ ಪ್ರಶ್ನೆಯೊಂದಿದೆ; ಆಳುವ ಕಾಂಗ್ರೆಸ್ ಮುಸ್ಲಿಂ ಸಮುದಾಯದ ಪ್ರಗತಿಪರರ ಜೊತೆಗಿರುತ್ತದೋ ಅಥವಾ ಪುರೋಗಾಮಿಗಳ ಜೊತೆ ಕೈ ಸೇರುತ್ತದೋ ಎನ್ನುವುದು ಈ ಪ್ರಶ್ನೆಗೆ ಆಧಾರವೆಂದರೆ ಸಂಪ್ರದಾಯಶೀಲ ಮುಸ್ಲಿಂ ಓಟು ಬ್ಯಾಂಕಿನ ಮೇಲೆ ಕಣ್ಣಿಟ್ಟಿರುವ ಕೇರಳದ ಕಾಂಗ್ರೆಸ್ ಮುಖ್ಯ ಮಂತ್ರಿ ಮತ್ತವರ ಬೆಂಬಲಿಗರ ವರ್ತನೆ. ಭಾರತೀಯ ಸಂವಿಧಾನ ಸಮಾನ ನಾಗರೀಕ ಸಂಹಿತೆಯನ್ನು ರೂಪಿಸುವಂತೆ ನಿರ್ದೇಶನ ನೀಡಿರುವುದನ್ನು ತಿರುವನಂತಪುರದ ಸಾರ್ವಜನಿಕ ಸಭೆಯಲ್ಲಿ ಗುಜರಾತಿನ ಮುಖ್ಯ ನ್ಯಾಯಾಧೀಶರು ವಿವರಿಸಿದಕ್ಕೆ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಮೇಲಿನ ನಾಯಕರುಗಳು ಬೊಬ್ಬೆ ಹೊಡೆದಿದ್ದಾರೆ. ಅವರಿಗೆ ಮತ್ತು ಅವರ ಮಿತ್ರಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗಿಗೆ ಬಹು ಪತ್ನಿತ್ವ, ಹೆಂಡತಿಯನ್ನು ವಿಚ್ಛೇಧಿಸುವ ಪುರುಷನ ಏಕಪಕ್ಷೀಯ ಹಕ್ಕು ಮುಂತಾದವುಗಳು ದೈವದತ್ತ ಕಾನೂನಿನ ಮೂಲ ಸತ್ವಗಳಾಗಿವೆ.

ಇ. ಎಂ. ಎಸ್.

"ಬ್ರಾಹ್ಮಣ ಬಂಡಾಯ" ಕವನ ಸಂಕಲನ

ವಿದ್ಯಾರ್ಥಿ ಯುವಜನರಿಂದ ಖಂಡನೆ

ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಗಂಗೋತ್ರಿಯಲ್ಲಿ ಕನ್ನಡ ವಿಭಾಗದಲ್ಲಿ ರೀಡರ್ ಆಗಿರುವ ಡಾ. ಗುಂಡ್ಮಿ ಚಂದ್ರಶೇಖರ ಐತಾಳ ಅವರ "ಬ್ರಾಹ್ಮಣ ಬಂಡಾಯ" ಎಂಬ ಕವನ ಸಂಕಲನವು ಸಂಪೂರ್ಣವಾಗಿ ತೀರಾ ಪ್ರತಿಗಾಮಿ ಮೌಲ್ಯಗಳನ್ನು ಎತ್ತಿ ಹಿಡಿಯುವ ಒಂದು ಕೃತಿಯಾಗಿದೆ ಎಂಬುದಾಗಿ ಮಂಗಳೂರು ತಾಲ್ಲೂಕ್ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಗಳು ಆಪಾದಿಸಿವೆ. "ಬ್ರಾಹ್ಮಣ" ಎಂಬ ಪದಕ್ಕೆ "ಹುಟ್ಟಿನಿಂದ ಬ್ರಾಹ್ಮಣನಾಗಿರುವವನು" ಎಂಬ ಒಂದೇ ಅರ್ಥದಲ್ಲಿ ಕೃತಿಯುದ್ದಕ್ಕೂ ಬಳಸಿರುವ ಕವಿವರ್ಯರು ಇವತ್ತಿನ 20 ನೇ ಶತಮಾನದಲ್ಲಿಯೂ ಬ್ರಾಹ್ಮಣನು ಇತರೆಲ್ಲ ಜಾತಿ ಜನರಿಗಿಂತ ಶ್ರೇಷ್ಠನಾದವನು ಎಂದು ಹೇಳುವುದು- ಅವರ ಪ್ರತಿಗಾಮಿತ್ವದ ಸ್ಪಷ್ಟ ಗುರುತಾಗಿದೆ. ಜ್ಞಾನವನ್ನು ಹೊಂದಲು ಹಾಗೂ ಅಧ್ಯಾಪನೆ ನಡೆಸಲು ಬ್ರಾಹ್ಮಣನೊಬ್ಬನೇ ಅರ್ಹ ಎಂದು ಬರೆಯುವ ಇವರು ತನ್ನಲ್ಲಿರುವ ಜ್ಞಾನವನ್ನು ಬ್ರಾಹ್ಮಣನು ಬ್ರಾಹ್ಮಣೇತರರಿಗೆ ಕೊಡಕೂಡದೆಂದು ಹೇಳುತ್ತಾರೆ. ಅಧ್ಯಾಪಕರಾಗಿ ಗುರುತರವಾದ ಹೊಣೆಗಾರಿಕೆಯುಳ್ಳ ಇವರು ಅವೈಚಾರಿಕವಾದ ತಾರತಮ್ಯವನ್ನು ಎತ್ತಿ ಹಿಡಿಯುವುದರಿಂದ, ಸಮಾನತೆ ಹಾಗೂ ಪ್ರಗತಿಪರತೆಯ ಬೆಂಬಲಿಗರಾದ ವಿಚಾರವಂತರೆಲ್ಲ ಇವರ ಧೋರಣೆಗಳನ್ನು ಖಂಡಿಸಬೇಕಾದ ಅನಿವಾರ್ಯತೆ ಇದೆ. ಇಂಥ ಧೋರಣೆಯಿಂದಾಗಿ ಇವರು ವಿದ್ಯಾರ್ಥಿಗಳಲ್ಲೂ ಭೇದಭಾವವನ್ನು ಕಾಣಬಹುದೆಂದು ಅನಿಸುವುದರಿಂದ, ಇವರ ಮೇಲೆ ವಿಶ್ವವಿದ್ಯಾಲಯವು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಎಸ್.ಎಫ್.ಐ ಒತ್ತಾಯಿಸುತ್ತದೆ.

ತಾ. 29-7-84 ರಂದು ಮಂಗಳೂರಿನಲ್ಲಿ ಸಭೆ ಸೇರಿದ ವಿದ್ಯಾರ್ಥಿ ಫೆಡೆರೇಶನ್ (ಎಸ್. ಎಫ್. ಐ.) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ.) ಜಂಟಿ ತಾಲೂಕು ಸಮಿತಿ ಸಭೆಯಲ್ಲಿ ಈ ಬಗ್ಗೆ ಖಂಡನಾ ನಿರ್ಣಯವನ್ನು ಕೈಗೊಳ್ಳಲಾಯಿತೆಂದು ಪ್ರಕಟನೆ ತಿಳಿಸಿದೆ.

○

ಸೀಟು ಶುಲ್ಕ ಕಾಲೇಜುಗಳ ಪ್ರಾರಂಭಕ್ಕೆ ವಿರೋಧ

ಮೈಸೂರು ಮತ್ತು ಬಿಜಾಪುರದಲ್ಲಿ ಇತ್ತೀಚೆಗೆ ಸೀಟು ಶುಲ್ಕ ಆಧಾರಿತವಾದ ಎರಡು ಹೊಸ ವೈದ್ಯಕೀಯ ಕಾಲೇಜುಗಳ ಪ್ರಾರಂಭಕ್ಕೆ ಜನತಾ ಮಂತ್ರಿ ಮಂಡಳವು ಅನುಮತಿ ನೀಡಿರುವುದನ್ನು ಹಾಗೂ ಇನ್ನು ಕೆಲವು ಸೀಟು ಶುಲ್ಕ ಆಧಾರಿತ ಕಾಲೇಜುಗಳ ಸ್ಥಾಪನೆಗೆ ಅವಕಾಶ ನೀಡುವ ಸಾಧ್ಯತೆಯ ಬಗ್ಗೆ ಸಚಿವ ಶ್ರೀ ಜೀವರಾಜ್ ಆಳ್ವರವರು ಹೇಳಿಕೆ ನೀಡಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸಿದೆ

ತನ್ನ ಅಧಿಕಾರಾವಧಿಯೊಳಗೆ ಸೀಟು ಶುಲ್ಕವನ್ನು ರದ್ದುಗೊಳಿಸುವ ಸ್ವಾಗತಾರ್ಹ ನಿರ್ಧಾರ ತೆಗೆದುಕೊಂಡ ಜನತಾ ಸರ್ಕಾರವು ಇತ್ತೀಚೆಗೆ ಸಂಸತ್ತಿನಲ್ಲಿ ಸೀಟು ಶುಲ್ಕ ವಸೂಲಿ ಮಾಡುವ ಕಾಲೇಜುಗಳ ಮಾನ್ಯತೆ ರದ್ದುಗೊಳಿಸಲು ವಿಶ್ವವಿದ್ಯಾಲಯ ಧನ ಸಹಾಯ ಆಯೋಗಕ್ಕೆ (ಯು ಜಿ ಸಿ.) ಅಧಿಕಾರ ನೀಡುವ ಮಸೂದೆಯೊಂದನ್ನು ಅಂಗೀಕರಿಸಿರುವ ದಿನದಂದೇ ಈ ನಿರ್ಧಾರ ತೆಗೆದುಕೊಂಡಿರುವುದು ಅತ್ಯಂತ ವಿಷಾದನೀಯವಾಗಿದೆ. ಡಾ। ಕೆ. ಎನ್. ರಾಜ್ ಆಯೋಗವು ಬಹಳ ಹಿಂದೆಯೇ ಕ್ಯಾಪಿಟೇಶನ್ ಫೀ ಆಧಾರಿತ ಹೊಸ ಕಾಲೇಜುಗಳ ಪ್ರಾರಂಭಕ್ಕೆ ಇನ್ನು ಮುಂದೆ ಅನುಮತಿ ನೀಡಬಾರದೆಂದು ಶಿಫಾರಸ್ಸು ಮಾಡಿರುವುದನ್ನು ಗಮನಿಸಬಹುದಾಗಿದೆ.

ದೇಶದ ಜನ ಕೋಟಿಯ ಆರೋಗ್ಯ ಪಾಲನೆಗೆ ಸಹಸ್ರಾರು ವೈದ್ಯರು ಅಗತ್ಯವಿರುವಾಗ ವೈದ್ಯಕೀಯ ಶಿಕ್ಷಣದ ವಿಸ್ತರಣೆಗಾಗಿ ಹೊಸ ಕಾಲೇಜುಗಳ ಸ್ಥಾಪನೆಗೆ ಮೂಲತಃ ತನ್ನ ವಿರೋಧವಿಲ್ಲವೆಂದು ಎಸ್.ಎಫ್.ಐ. ಈ ಮೂಲಕ ಸ್ಪಷ್ಟ ಪಡಿಸುತ್ತದೆ. ಆದರೆ ನಿರುದ್ಯೋಗಿ ವೈದ್ಯಕೀಯ ಪದವೀಧರರಿಗೆ ಉದ್ಯೋಗವಕಾಶಗಳನ್ನು ಕಲ್ಪಿಸಲು ಹಾಗೂ ಕ್ಯಾಪಿಟೇಶನ್ ಶುಲ್ಕದ ವಸೂಲಿಯನ್ನು ಸಂಪೂರ್ಣವಾಗಿ ರದ್ದು ಮಾಡುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಒತ್ತಾಯಿಸಲು ವಿದ್ಯಾರ್ಥಿ ಸಮುದಾಯವು ತೀವ್ರ ಚಳವಳಿ ಹೂಡುವುದು ಅನಿವಾರ್ಯವಾಗಿದೆ, ಎಂಬುದಾಗಿ ಎಸ್. ಎಫ್. ಐ. ಕಾರ್ಯದರ್ಶಿ ಎಸ್. ಆರ್. ಆರಾಧ್ಯ ತಿಳಿಸಿದ್ದಾರೆ.

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು | 9

ಬೂರ್ಜ್ವಾ ಸಿದ್ಧಾಂತಿಗಳು : ನಾಚಿಕೆಗೇಡೀ ಕೃತ್ಯಗಳ ಸಮರ್ಥನೆ — ಮೌಲ್ಯ ಮಾಪನಕ್ಕೆ ಹಿಂದೇಟು

(ನಾಲ್ಕನೆ ಭಾಗದ ಮೊದಲ ಕಂತು)

— ಕಾ|| ಎಂ. ಬಸವಪುನ್ನಯ್ಯ

ಅರುಣ್ ಶೌರಿಯ ಅಪಾದನೆಗಳಿಗೆ ಸಿ. ಪಿ. ಐ. [ಎಂ] ನ ಪೊಲಿಟ್ ಬ್ಯೂರೋ ಸದಸ್ಯ ಕಾ. ಎಂ. ಬಸವಪುನ್ನಯ್ಯ ಅವರು ಬರೆದ ಲೇಖನಗಳ ಒಟ್ಟು ನಾಲ್ಕು ಭಾಗಗಳ ಪೈಕಿ ಮೂರನ್ನು ಕನ್ನಡಕ್ಕೆ ಅನುವಾದಿಸಿ ಕಳೆದ ಎಂಟು ಸಂಚಿಕೆಗಳಲ್ಲಿ ಪ್ರಕಟಿಸಿದ್ದೇವೆ. ನಾಲ್ಕನೆಯ ಭಾಗದ ಪ್ರಥಮ ಕಂತನ್ನು ಈ ಸಂಚಿಕೆಯಲ್ಲಿ ನೀಡುತ್ತಿದ್ದೇವೆ.

ಭಾರತದ ಸಂರಚನೆ ಬಹು-ಜನಾಂಗೀಯ, ಬಹು ಭಾಷಾ ಮತ್ತು ಬಹು ರಾಷ್ಟ್ರೀಯತಾ ಸ್ವಭಾವದ್ದಾಗಿದ್ದು ಈಗಲೂ ಅದೇ ಸ್ವಭಾವ ಪಡೆದಿದೆ ಎಂದು ತಿಳಿಯಲು ಹಾಗೂ ಐಕ್ಯತೆ ಮತ್ತು ರಾಷ್ಟ್ರೀಯ ಸಮಗ್ರತೆಯನ್ನು ಕಾಯ್ದುಕೊಳ್ಳ ಬೇಕಾದರೆ ವಿಶೇಷ ರಾಜಕೀಯ ನೈಪುಣ್ಯ ಹಾಗೂ ತಿಳುವಳಿಕೆ ಅಗತ್ಯ ಎಂಬುದನ್ನು ಅರಿಯಲು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನ ಬೂರ್ಜ್ವಾ- ಭೂಮಾಲಕ ಮುಖಂಡರು ಶೋಚನೀಯವಾಗಿ ವಿಫಲರಾದರು. ಧರ್ಮದ ಆಧಾರದ ಮೇಲೆ ಪಾಕಿಸ್ತಾನದ ಪ್ರತ್ಯೇಕ ಪ್ರಭುತ್ವದ ರಚನೆ ಪೂರ್ಣವಾಗಿ ಅಸಮರ್ಪಕ ಎಂದು ಸಿದ್ಧವಾಗಿದೆ. ಮಿಲಿಟರಿ ಸರ್ವಾಧಿಕಾರದ ಸ್ಥಾಪನೆಯಿಂದಲೂ ಬಾಂಗ್ಲಾದೇಶ್ ಪ್ರತ್ಯೇಕಗೊಳ್ಳುವುದನ್ನು ತಡೆಯುವುದು ಸಾಧ್ಯವಾಗಲಿಲ್ಲ. ಜಿಯಾ ರಾಜ್ಯಭಾರದಲ್ಲಿ ಪಾಕಿಸ್ತಾನದ ಆಳುವ ವರ್ಗ ತಳೆದ ಕರ್ಕಶ ಮೂಲಭೂತವಾದಿ ಧೋರಣೆಗಳೂ ಕೂಡಾ ಪ್ರತ್ಯೇಕ ಸಿಂಧೀ, ಬಲೂಚೀ ಮತ್ತು ಪಠಾಣ್ ಪ್ರದೇಶಗಳ ಬೇಡಿಕೆಗಳನ್ನು ದಮನ ಮಾಡುವುದರಲ್ಲಿ ಅಸಮರ್ಥವಾದವು.

ಭಾರತೀಯ ಮುಖಂಡರಿಗೆ ಕೂಡಾ ದೇಶದ ಐಕ್ಯತೆಯನ್ನು ಕಾಪಾಡುವಲ್ಲಿ ಪಾಠ ಕಲಿಯುವ ಸಾಮರ್ಥ್ಯ ಇಲ್ಲ ಎಂಬುದು ಸಿದ್ಧವಾಗುತ್ತಿದೆ. ಪಂಜಾಬ್, ಅಸ್ಸಾಂಗಳಲ್ಲಿನ ಬೆಳವಣಿಗೆಗಳು, ಕೋಮು ಮತ್ತು ಜಾತಿ ಗಲಭೆಗಳಲ್ಲಿ ಹೆಚ್ಚಳ, ಕೇಂದ್ರ-ರಾಜ್ಯ ತೊಡಕುಗಳಲ್ಲಿ ತೀವ್ರತೆ ಮುಂತಾದವುಗಳಿಂದ ಇದು ಸುಸ್ಪಷ್ಟ. ರಾಜ್ಯಗಳ ಸ್ವಯಮಾಧಿಕಾರದ ನ್ಯಾಯಬದ್ಧ ಬೇಡಿಕೆಗಳನ್ನು ಕಾಂಗ್ರೆಸ್ ಮುಖಂಡರು "ಭಾಷಾವಾದ", "ಪ್ರಾಂತೀಯತೆ", "ಸಂಕುಚಿತ ದೃಷ್ಟಿ" ಎಂದೆಲ್ಲಾ ಹಳಿಯುತ್ತಿದ್ದಾರೆ.

ಭಾರತದ ರಾಜಕೀಯ ಮತ್ತು ಆಡಳಿತಾತ್ಮಕ ಐಕ್ಯತೆಯನ್ನು "ಬ್ರಿಟಿಶ್ ಖಡ್ಗ ಹೇರಿತು" (ಮಾರ್ಕ್ಸ್‌ರ ಉದ್ಗಾರವನ್ನು ಬಳಸುವುದಾದರೆ) ಎಂಬುದು ಅವರ ಗಮನಕ್ಕೆ ಬರುವುದಿಲ್ಲ. "ಮಹಮ್ಮದೀಯರು, ಮೊಗಲರು ಅಥವಾ ಬ್ರಿಟಿಶರ ಒತ್ತಡವಿಲ್ಲದಿದ್ದಾಗ ಹಿಂದುಸ್ತಾನ ಅದರಲ್ಲಿ ಎಷ್ಟು ಪಟ್ಟಣಗಳು, ಅಷ್ಟೇ ಏಕೆ ಎಷ್ಟು ಹಳ್ಳಿಗಳು ಇದ್ದಾವೆಯೋ ಅಷ್ಟು ಸಂಖ್ಯೆಯ ಸ್ವತಂತ್ರ ಮತ್ತು ಪರಸ್ಪರ ವಿರೋಧೀ ಪ್ರಭುತ್ವಗಳಾಗಿ ವಿಸರ್ಜನೆಗೊಂಡಿರುವುದನ್ನು ನಾವು ಕಾಣುತ್ತೇವೆ" ಎಂದು ಮಾರ್ಕ್ಸ್ ಗಮನಿಸಿದ್ದರು.

ಆಳುವ ವರ್ಗಗಳ ಅಸಾಮರ್ಥ್ಯ

"ಬ್ರಿಟಿಶ್ ಖಡ್ಗ ಹೇರಿದ ಆ ಐಕ್ಯತೆ ಈಗ ವಿದ್ಯುತ್ ಟೆಲಿಗ್ರಾಫ್‌ನಿಂದ ಗಟ್ಟಿಗೊಂಡು ಶಾಶ್ವತಗೊಳ್ಳುತ್ತದೆ" ಎನ್ನುವಾಗ ದೇಶದ ಆರ್ಥಿಕ ಸಮಗ್ರೀಕರಣದ ಕಲ್ಪನೆ ಮಾರ್ಕ್ಸ್‌ಗಿತ್ತು. ವಿದ್ಯುತ್ ಟೆಲಿಗ್ರಾಫ್ ಮತ್ತು ಇತರ ಆಧುನಿಕ ಸಂಪರ್ಕ ಸಾಧನಗಳು, ವ್ಯಾಪಾರ, ವಾಣಿಜ್ಯ ಇವೆಲ್ಲಾ ಏಕೀಕರಣಕ್ಕೆ ಪೂರಕವಾದ ಅಂಶಗಳಾಗಿ ವರ್ತಿಸುತ್ತವೆ ಎಂಬುದೇನೋ ನಿಜ. ಆದರೆ ಬಂಡವಾಳಶಾಹೀ ಬೆಳವಣಿಗೆಯ ದಿವಾಳಿಕೋರ ಮಾರ್ಗವನ್ನನುಸರಿಸಿರುವ ಭಾರತೀಯ ಬೂರ್ಜ್ವಾ ವರ್ಗದ ಮೇಲೆ ಅದರಿಂದಾಗಿ ಪ್ರತಿಕ್ರಿಯಾವಾದಿ ಭೂಮಾಲಕ ವರ್ಗಗಳೊಂದಿಗೆ ಮೈತ್ರಿ ಮಾಡಿಕೊಳ್ಳಲೇಬೇಕಾದ ಒತ್ತಡವಿದ್ದು, ಇದು ತನ್ಮೂಲಕ ಒಂದು ದೊಡ್ಡ ಆಂತರಿಕ ಮಾರುಕಟ್ಟೆಯನ್ನು ಪಡೆಯುವುದಕ್ಕಾಗಿ ಅವರು ಯಾವ ರಾಜಕೀಯ ಐಕ್ಯತೆಯನ್ನು ಕಾಪಾಡ ಬಯಸುತ್ತಾರೋ ಅದನ್ನೇ ಬುಡಮೇಲು ಮಾಡುತ್ತಿದೆ.

ಕೇಂದ್ರ-ರಾಜ್ಯಗಳ ಸಂಬಂಧವನ್ನು ಪುನರ್ರಚಿಸಿ, ಭಾರತ ಸಂಘವನ್ನು ಒಂದು ನಿಜವಾದ ಒಕ್ಕೂಟ ಸಂಘವನ್ನಾಗಿ ಮಾಡಿ ಭಾರತೀಯ ಐಕ್ಯತೆಯನ್ನು ಕಾಯ್ದುಕೊಳ್ಳಬೇಕೆಂಬ ಕಮ್ಯುನಿಸ್ಟ್ ಪರಿಕಲ್ಪನೆ ಕಾಂಗ್ರೆಸ್ ನಾಯಕತ್ವ ಪ್ರಭುತ್ವದ ಬಗ್ಗೆ ಹೊಂದಿರುವ ಏಕ ಘಟಕ ಪರಿಕಲ್ಪನೆಗೆ ತದ್ವಿರುದ್ಧವಾಗಿದೆ. ಇವುಗಳಲ್ಲಿ ಮೊದಲ ಪರಿಕಲ್ಪನೆ ಹೆಚ್ಚೆಚ್ಚು ಪ್ರಜಾಪ್ರಭುತ್ವೀಕರಣಕ್ಕಾಗಿ ಹೋರಾಟ ನಡೆಸಿದರೆ, ಸಂಕುಚಿತ ವರ್ಗಹಿತಾಸಕ್ತಿಗಳನ್ನಾಧರಿಸಿರುವ ಎರಡನೇ ಪರಿಕಲ್ಪನೆ ಸರ್ವಾಧಿಕಾರೀ ಆಳ್ವಿಕೆಯನ್ನು ಸ್ಥಾಪಿಸಲು ಹೆಣಗುತ್ತದೆ ಮತ್ತು ರಾಷ್ಟ್ರೀಯ ಸಂಕುಚಿತ ವಾದವನ್ನು ಪೋಷಿಸುತ್ತದೆ. ಪ್ರಜಾಪ್ರಭುತ್ವದ ಕತ್ತು ಹಿಸುಕುವುದರಿಂದ ಮತ್ತು ಸರ್ವಾಧಿಕಾರೀ ಆಳ್ವಿಕೆಯನ್ನು ಹೇರುವುದರಿಂದ ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವೇನೂ ದೊರೆಯುವುದಿಲ್ಲ. 1975 ರಲ್ಲಿ ಶ್ರೀಮತಿ ಗಾಂಧಿಯವರು ಹೇರಿದ ತುರ್ತುಪರಿಸ್ಥಿತಿಯ ಆಳ್ವಿಕೆಯ ನಂತರದ ಬೆಳವಣಿಗೆಗಳು ಇದಕ್ಕೆ ಸಾಕ್ಷಿ.

ವಿಭಿನ್ನ ದೇಶಗಳ ಮತ್ತು ರಾಷ್ಟ್ರೀಯ ಗುಂಪುಗಳ ಐಕ್ಯತೆಯನ್ನು ಕಾಪಾಡಲು ಬಂಡವಾಳ ಶಾಹೀ ಅಸಮರ್ಥವಾಗಿದೆ ಎನ್ನುವುದನ್ನು ಜಾಗತಿಕ ಇತಿಹಾಸ ತೋರಿಸಿಕೊಟ್ಟಿದೆ. ಸಮಾಜವಾದ ಮತ್ತು ಬಂಡವಾಳ ಶಾಹಿಯ ನಡುವಿನ ವೈರುಧ್ಯ, ಮತ್ತು ಸಾಮ್ರಾಜ್ಯಶಾಹಿಯ ಆಂತರಿಕ ವೈರುಧ್ಯ ಮತ್ತು ಸಾಮ್ರಾಜ್ಯಶಾಹಿ ಹಾಗೂ ನವ ವಿಮೋಚಿತ ದೇಶಗಳ ನಡುವಿನ ವೈರುಧ್ಯ ಇವೆಲ್ಲಾ ತೀವ್ರಗೊಳ್ಳುತ್ತಿರುವ ಪ್ರಸಕ್ತ ಜಾಗತಿಕ ಸನ್ನಿವೇಶದಲ್ಲಿ, ಭಾರತೀಯ ಬೂರ್ಜ್ವಾ ವರ್ಗಕ್ಕೆ, ತಾನು ಭೂ-ಮಾಲಕ ವರ್ಗಗಳೊಂದಿಗೆ ಸಖ್ಯತೆ ಹೊಂದಲೇ ಬೇಕಾಗಿರುವ ಪರಿಸ್ಥಿತಿಯಲ್ಲಿ ದೇಶದ ಐಕ್ಯತೆಯನ್ನು ಕಾಯ್ದುಕೊಳ್ಳುವುದು ಮತ್ತಷ್ಟು ದುಸ್ತರವಾಗುತ್ತಿದೆ. ಕಾಂಗ್ರೆಸ್ ಮುಖಂಡತ್ವ ಅನುಸರಿಸುತ್ತಿರುವ ದಿವಾಳಿಕೋರ ಬಂಡವಾಳಶಾಹೀ ಮಾರ್ಗ, ಅದರ ಜತೆಗೆ ಸಂಪ್ರದಾಯ ಶರಣವಾದ ಪ್ರಗತಿವಿರೋಧಿ ಕುರುಡು ಸಾಮಾಜಿಕ ಮತ್ತು ರಾಜಕೀಯ ತತ್ತ್ವಗಳು ಇವುಗಳ ಮೂಲಕ ಭಾರತೀಯ ಐಕ್ಯತೆಯನ್ನು ಕಾಯ್ದುಕೊಳ್ಳುವುದಾಗಲೀ, 1960 ರಿಂದೀಚೆಗೆ ಬಹಳಷ್ಟು ಒತ್ತಡಗಳಿಗೊಳಗಾದ ರಾಷ್ಟ್ರೀಯ ಸಮಗ್ರತೆಯನ್ನು ಪುನಃ ಬೆಸೆಯುವುದಾಗಲೀ ಸಾಧ್ಯವಿಲ್ಲ.

ಗೋಹತ್ಯೆ ಪ್ರಶ್ನೆ- ಒಂದು ಉದಾಹರಣೆ

ದೇಶವನ್ನು ಆಳುತ್ತಿರುವ ಬೂರ್ಜ್ವಾ ಭೂಮಾಲಕ ಕೂಟ ಸಾಚಾ ಜಾತ್ಯತೀತ ತತ್ತ್ವವನ್ನು ಆಚರಣೆಗೆ ತರಲು ಅಸಮರ್ಥವಾಗಿದೆ. ಯಾಕೆಂದರೆ ತನ್ನ ಆಳ್ವಿಕೆಯನ್ನು ಉಳಿಸಿಕೊಳ್ಳಬೇಕಾದರೆ ಅದು ನಮ್ಮ ಸಮಾಜದ ಅತ್ಯಂತ ಹಿಂದುಳಿದ, ಬಂಡವಾಳಶಾಹೀ-ಪೂರ್ವ ಮತ್ತು ಊಳಿಗಮಾನ್ಯ ತತ್ತ್ವಗಳಿಗೆ ರಿಯಾಯಿತಿ ತೋರಲೇಬೇಕಾಗಿದೆ. ಧಾರ್ಮಿಕ ಮತ್ತು ಜಾತಿವಾದಿಗಳ ಕೈಯಲ್ಲಿರುವ ಸಾಮೂಹಿಕ ಮಾಧ್ಯಮಗಳು ಮತ್ತು ಶಿಕ್ಷಣ ವ್ಯವಸ್ಥೆ ಜಾತ್ಯತೀತ ಮೌಲ್ಯಗಳಿಗೆ ಗಂಡಾಂತರ ತರುತ್ತಿದ್ದರೆ, ಅದಕ್ಕೆ ಅವಕಾಶ ಕೊಡಲಾಗುತ್ತಿದೆ.

ಗೋಹತ್ಯೆ ಪ್ರಶ್ನೆ ಕುರಿತಾದ ಚಳುವಳಿಯಲ್ಲಿ ಕಾಂಗ್ರೆಸ್ ಮುಖಂಡತ್ವ ಹಿಂದುಳಿದ ಹಿಂದೂ ಭಾವನೆಗಳನ್ನು ತುಷ್ಟಿಗೊಳಿಸಲು ಯತ್ನಿಸಿದ್ದು ಈ ಮುಖಂಡತ್ವ ರಾಷ್ಟ್ರೀಯ ಐಕ್ಯತೆಯನ್ನು ತಳಕೆಳಗು ಮಾಡುವಲ್ಲಿ ಸಕ್ರಿಯ ಸಾಧನವಾಗಿ ಕೆಲಸಮಾಡಿದೆ ಎಂಬುದಕ್ಕೆ ಸ್ಪಷ್ಟ ಉದಾಹರಣೆ. ಅವರು ಗಾಂಧಿ ಕೂಡಾ ಈ ಪ್ರಶ್ನೆಯನ್ನು ಕುರಿತಂತೆ ವ್ಯಕ್ತಪಡಿಸಿದ ಘನ ಅಭಿಪ್ರಾಯಗಳನ್ನೂ ನಾಚಿಕೆಯಿಲ್ಲದೆ ನಿರ್ಲಕ್ಷಿಸಿದರು.

1940 ರ ಏಪ್ರಿಲ್ 27 ರ "ಹರಿಜನ್" ನಲ್ಲಿ "ಕ್ವೆಶ್ಚನ್ ಬಾಕ್ಸ್" ("ಪ್ರಶ್ನೆ ಪೆಟ್ಟಿಗೆ") ಶಿರೋನಾಮೆಯ ಕೆಳಗೆ,

"ಮುಸ್ಲಿಂ ಸಾರ್ವಜನಿಕರನ್ನು ಒಂದು ಅತೀ ಮಹತ್ತ್ವಪೂರ್ಣ ಪ್ರಶ್ನೆಯ ಬಗ್ಗೆ ತೃಪ್ತಿಗೊಳಿಸಬೇಕಾಗಿದೆ. ಒಂದು ಹಿಂದೂ ಬಹುಸಂಖ್ಯಾತ ಸರಕಾರದ ಕೆಳಗೆ ಮುಸ್ಲಿಮರಿಗೆ ಅವರ ರಾಷ್ಟ್ರೀಯ ಆಹಾರ- ಗೋಮಾಂಸ-ತಿನ್ನಲು ಅವಕಾಶ ನೀಡಲಾಗುವುದೇ? ಈ ಸರ್ವ ಮಹತ್ತ್ವದ ಪ್ರಶ್ನೆಯ ಮೇಲೆ ಮುಸ್ಲಿಮರನ್ನು ಸಂತೃಪ್ತಿಗೊಳಿಸುವುದು ನಿಮಗೆ ಸಾಧ್ಯವಾದರೆ ಬಹಳಷ್ಟು ತೊಡಕುಗಳನ್ನು ಪರಿಹರಿಸಬಹುದು. ನಿಮ್ಮ ಪತ್ರಿಕೆ "ಹರಿಜನ್"ನಲ್ಲಿ ನೀವು ಈ ಪ್ರಶ್ನೆಗೆ ನೇರ ಉತ್ತರ ಕೊಡಬೇಕು." ಎಂಬುದಕ್ಕೆ ಗಾಂಧಿ ಬರೆದ ಉತ್ತರ —

"ಈ ಪ್ರಶ್ನೆ ಹೇಗೆ ಏಳುತ್ತದೆ ಎನ್ನುವುದು ನನಗೆ ತಿಳಿಯದು ಯಾಕೆಂದರೆ ಕಾಂಗ್ರೆಸ್ಸಿಗರು ಅಧಿಕಾರದಲ್ಲಿದ್ದಾಗ ಗೋಮಾಂಸ ಸೇವಿಸುವ ಮುಸ್ಲಿಮರ ಆಚರಣೆಯಲ್ಲಿ ಹಸ್ತಕ್ಷೇಪವನ್ನು ನಡೆಸಿದಂತಿಲ್ಲ ಆದರೆ ಈ ಸೈದ್ಧಾಂತಿಕ ಪ್ರಶ್ನೆಗೆ ಉತ್ತರ ಅಗತ್ಯ. ಒಬ್ಬ ಹಿಂದೂವಾಗಿ, ಒಬ್ಬ ಕಟ್ಟಾ ಶಾಖಾಹಾರಿಯಾಗಿ, ಹಸುವನ್ನು ನನ್ನ ತಾಯಿಗೆ (ದುರ್ದೈವಕ್ಕೆ ಈಗ ಈ ಭೂಮಿಯ ಮೇಲಿಲ್ಲ) ಸಮಾನವಾಗಿ ಗೌರವಿಸುವ ಗೋ ಭಕ್ತನಾಗಿ ನಾನು ಹಸುಗಳನ್ನು ವಧೆ ಮಾಡಲು ಮುಸ್ಲಿಮರಿಗೆ ಅವರು ಬಯಸಿದರೆ ಪೂರ್ಣ ಸ್ವಾತಂತ್ರ್ಯವಿರಬೇಕು ಎಂದು ಸದಾ ಹೇಳುತ್ತೇನೆ- ಆರೋಗ್ಯದ ದೃಷ್ಟಿಯ ಮಿತಿಗಳಿಗೆ, ತಮ್ಮ ಹಿಂದೂ ನೆರೆಕರೆಯವರ ಸೂಕ್ಷ್ಮ ಭಾವನೆಗಳಿಗೆ ಧಕ್ಕೆ ತರದ ರೀತಿಯಲ್ಲಿ ಇದನ್ನು ಮಾಡಬೇಕು ಎಂಬುದಂತೂ ಇದ್ದೇ ಇದೆ. ಮುಸ್ಲಿಮರ ಗೋವಧೆಯ ಸ್ವಾತಂತ್ರ್ಯವನ್ನು ಪೂರ್ಣವಾಗಿ ಸ್ವೀಕರಿಸುವುದು ಕೋಮು ಸೌಹಾ

> ಸಿ. ಪಿ. ಐ. ವಿರುದ್ಧ ಅದರ ಆರೋಪಿತ ಅಪರಾಧದ ಪೂರ್ಣ 42 ವರ್ಷಗಳ ನಂತರ ಆರೋಪಗಳ ಪಟ್ಟಿಯನ್ನು ಸಂಕಲಿಸುವಾಗ ಅರುಣ್‌ಶೌರಿ ಸೈದ್ಧಾಂತಿಕ-ರಾಜಕೀಯ ಪ್ರಶ್ನೆಗಳನ್ನು ನೈತಿಕ ಪ್ರಶ್ನೆಗಳೆಂದು ತಪ್ಪಾಗಿ, ಆದರೆ ತನ್ನ ಸಹಜ ಬುದ್ಧಿ ಗುಣಗುಣವಾಗಿ ಕಾಣುತ್ತಾರೆ.

ದರ್ಶಕ್ಕೆ ಅನಿವಾರ್ಯ ಮತ್ತು ಅದು ಹಸುವನ್ನು ಉಳಿಸುವ ಏಕೈಕಮಾರ್ಗ.

ತಿಪ್ಪೆ ಸಾರಿಸುವ ವಿಫಲಯತ್ನ

ಗಾಂಧಿಯ ಅಗ್ರಗಣ್ಯ ಶಿಷ್ಯ ವಿನೋಬಾ ಭಾವೆಯ ನೇತೃತ್ವದಲ್ಲಿ ನಡೆದ "ಗೋಹತ್ಯೆ"ಯ ವಿರುದ್ಧ ಆಂದೋಲನಕ್ಕೆ ಕಾಂಗ್ರೆಸ್ ಮುಖಂಡರು ಪೋಷಕರಾಗಿದ್ದರು. ಈ ಮುಖಂಡರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರೂ ಸೇರಿದ್ದರು. ಈ ಮೂಲಕ ದೇಶದ ಐಕ್ಯತೆಯನ್ನು ಬೆಸೆಯುವ ಸಾಮರ್ಥ್ಯ ಇರುವ ಏಕೈಕ ಮಾರ್ಗವಾದ ಜಾತ್ಯತೀತ ತತ್ತ್ವಗಳನ್ನು ನಿರಾಕರಿಸಲಾಯಿತು. ದೇಶದಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರು ಮಾತ್ರವಲ್ಲ ಹಲವು ಬುಡಕಟ್ಟುಗಳ ಜನರು, ಮತ್ತು ಇತರರು ಬಳಸುವ ಗೋಮಾಂಸವನ್ನು ತಿನ್ನುವುದು ಅಪವಿತ್ರ ಕೆಲಸ ಎಂದು ನಿಂದಿಸಿದ ಘೋಷಣೆಗಳನ್ನು ಕೊಟ್ಟ ಗೋಹತ್ಯಾ ವಿರೋಧೀ ಆಂದೋಲನದ ಗುರಿ ಹಿಂದೂ ಜನಸಾಮಾನ್ಯರ ಪ್ರಜ್ಞೆಯ ಅತ್ಯಂತ ಹಿಂದುಳಿದ, ಜಾತ್ಯತೀತತೆಗೆ ವಿರುದ್ಧವಾದ ಅಂಶಗಳನ್ನು ಒಲೈಸಿ ಅವರ ಬೆಂಬಲ ಗಳಿಸುವುದೇ ಆಗಿತ್ತು. ಇಂತಹ ಆಂದೋಲನಗಳಿಗೆ ಅನುಮೋದನೆ ನೀಡುತ್ತಿರುವುದು ಒಂದು ಜಾತ್ಯತೀತ ಸರಕಾರ!

ಇದರಿಂದ ಮತ್ತು ಇಂತಹ ಇನ್ನಿತರ ಉದಾಹರಣೆಗಳಿಂದ, ರಾಷ್ಟ್ರದ ಐಕ್ಯತೆಯನ್ನು ಛಿದ್ರಗೊಳಿಸಲು ನೇರ ಕಾರಣ ಬೂರ್ಜ್ವಾ-ಭೂಮಾಲಕ ಆಳುವ ವರ್ಗಗಳೇ ಎನ್ನುವುದನ್ನು ಮತ್ತು ದೇಶದಲ್ಲಿ ಕೋಮು ಸೌಹಾರ್ದವನ್ನು ಪೋಷಿಸುವ ಧೋರಣೆಗಳನ್ನು ಅನುಸರಿಸಲು ಅವುಗಳು ಅಸಮರ್ಥವಾಗಿದೆಯೆಂಬುದನ್ನು ಕಾಣಬಹುದು. ಈ ವಾಸ್ತವತೆಯನ್ನು ಅಡಗಿಸಿ ತಿಪ್ಪೆ ಸಾರಿಸಲು ಕಮ್ಯುನಿಷ್ಟರ ನಿಂದನೆ ಮತ್ತು ರಾಷ್ಟ್ರೀಯತೆಯ ಪ್ರಶ್ನೆ ಕುರಿತು ಮಾರ್ಕ್ಸ್‌ವಾದೀ ಸಿದ್ಧಾಂತದ ಅಪಹಾಸ್ಯದಿಂದ ಸಿಗುವ ನೆರವು ಅತ್ಯಲ್ಪ.

ಬೂರ್ಜ್ವಾ ಸಿದ್ಧಾಂತಿಗಳ ಸಹಜ ಗೊಂದಲ

ಕಮ್ಯುನಿಷ್ಟರು, ನಿಜವಾಗಿ, ದೇಶದ ಐಕ್ಯತೆಯನ್ನು ಬೆಸೆಯಲು ಮತ್ತು ಕೋಮು ಸೌಹಾರ್ದಕ್ಕೆ ಒತ್ತಾಸೆ ಕೊಡಲು ರಾಷ್ಟ್ರೀಯ ಪ್ರಶ್ನೆಯ ಕುರಿತಾದ ಮಾರ್ಕ್ಸ್‌ವಾದೀ ಸಿದ್ಧಾಂತದ ಆಧಾರದ ಮೇಲೆ ಪರ್ಯಾಯ ಧೋರಣೆಗಳನ್ನು ಮಂಡಿಸಿದ್ದರು. ಮತ್ತು ಹೋರಾಟ ನಡೆಸಿದ್ದರು. ಎಡರಂಗ ಸರಕಾರಗಳ ಆಡಳಿತದಲ್ಲಿರುವ ರಾಜ್ಯಗಳ ದಾಖಲೆಯೇ ಕೋಮು ಸೌಹಾರ್ದವನ್ನು ಕಾಯ್ದುಕೊಳ್ಳುವ ಮಹತ್ವಪೂರ್ಣ ಪ್ರಶ್ನೆಯ ಬಗ್ಗೆ ಕಮ್ಯುನಿಸ್ಟ್ ನೀತಿ ಮತ್ತು ಆಚರಣೆಯ ಋಜುತ್ವಕ್ಕೆ ಉದಾಹರಣೆ.

ಸಿ. ಪಿ. ಐ. ವಿರುದ್ಧ ಆದರೆ ಆರೋಪಿತ ಅಪರಾಧದ ಪೂರ್ಣ 42 ವರ್ಷಗಳ ನಂತರ ಆರೋಪಗಳ ಪಟ್ಟಿಯನ್ನು ಸಂಕಲಿಸುವಾಗ ಅರುಣ್ ಶೌರಿ ಸೈದ್ಧಾಂತಿಕ-ರಾಜಕೀಯ ಪ್ರಶ್ನೆಗಳನ್ನು ನೈತಿಕ ಪ್ರಶ್ನೆಗಳೆಂದು ತಪ್ಪಾಗಿ, ಆದರೆ ತನ್ನ ಸಹಜ ಬುದ್ಧಿಗನುಗುಣವಾಗಿ ಕಾಣುತ್ತಾರೆ.

1942 ರ ಘಟನೆಗಳಲ್ಲಿನ ರಾಜಕೀಯ ಪ್ರಶ್ನೆಯೆಂದರೆ ಇದು-ಸಮಸ್ತ ಮಾನವಕುಲವನ್ನ ಗುಲಾಮಗಿರಿಗೊಳಪಡಿಸುವ ಯೋಜನೆಗಳನ್ನು ಹೊಂದಿದ್ದ ಜಪಾನೀ ಮತ್ತು ಜರ್ಮನ್ ಆಕ್ರಮಣಕಾರರ ವಿರುದ್ಧ ತನಗೆ ಸಾಧ್ಯವಿದ್ದುದನ್ನೆಲ್ಲಾ ಮಾಡಲು ಸಿ. ಪಿ. ಐ. ಬಯಸಿದ್ದರೆ, ಅತ್ತ ಕಾಂಗ್ರೆಸ್ ಮುಖಂಡತ್ವ ಬ್ರಿಟಿಶರನ್ನು ಹೊಡೆದೋಡಿಸುವ ನೆಪದಲ್ಲಿ ಜಪಾನೀ ಆಕ್ರಮಣಕಾರರೊಂದಿಗೆ ರಾಜಿ ಮಾಡಿಕೊಳ್ಳಬೇಕೆಂದು ಸೂಚಿಸುವ ಮಟ್ಟದವರೆಗೆ ಹೋಗಿತ್ತು. ಈ ಎರಡು ಪರಸ್ಪರ ವಿಭಿನ್ನ ಅಂದಾಜುಗಳಿಂದ ಹೊಮ್ಮಿದ ಕಾರ್ಯತಂತ್ರಗಳನ್ನು ಪರಿಶೀಲಿಸುವ ಮೊದಲು ಈ ಎರಡರಲ್ಲಿ ಸಾರಭೂತವಾಗಿ ಸರಿಯೆಂದು ಸಿದ್ಧಗೊಂಡಿರುವುದು ಯಾವುದು ಎಂಬುವನ್ನು ಉತ್ತರಿಸಬೇಕಾಗುತ್ತದೆ. ಅರುಣ್ ಶೌರಿ ಈ ಮೂಲಭೂತ ಪ್ರಶ್ನೆಯಿಂದ ನುಣುಚಿ ಕೊಳ್ಳುತ್ತಾರೆ. ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸ್ಟ್ ಶಕ್ತಿಗಳ ನಡುವೆ ಅಂತರ್-ಸಾಮ್ರಾಜ್ಯಶಾಹೀ ಯುದ್ಧವಾಗಿ ಆರಂಭವಾದ ಎರಡನೇ ಮಹಾಯುದ್ಧ ಆರು ವರ್ಷಗಳ ಕಾಲವೂ ಸ್ವಲ್ಪವೂ ಬದಲಾಗದೇ ಹಾಗೆ ಮುಂದುವರಿಯಿತು ಎಂದು ಆತ ಭಾವಿಸುವಂತೆ ಕಾಣುತ್ತದೆ.

ಅಸಂಬದ್ಧ ನಿಲುವಿಗೆ ಕಾರಣ

ಸಾಮಾಜಿಕ-ಚಾರಿತ್ರಿಕ ಘಟನೆಗಳನ್ನು ವಿಶ್ಲೇಷಿಸಬೇಕಾದರೆ ವರ್ಗಶಕ್ತಿಗಳ ನಡುವೆ ವ್ಯತ್ಯಾಸ ಕಾಣುವ ಮತ್ತು ಇಂತಹ ಘಟನೆಗಳ ಬೆಳವಣಿಗೆಗಳ ವಿವಿಧ ಘಟ್ಟಗಳಲ್ಲಿ ಸಂಬಂಧಗಳ ಸಮತೋಲನದಲ್ಲಿನ ಬದಲಾವಣೆಗಳನ್ನು ಗುರುತಿಸುವ ಸಾಮರ್ಥ್ಯವಿರಬೇಕಾಗುತ್ತದೆ. ಈ ಎರಡೂ ಅಂಶಗಳಲ್ಲಿ ಶೌರಿಯ ವಿಫಲತೆ ಆತನನ್ನು ಯುದ್ಧವೆಂದರೆ ಯುದ್ಧವಷ್ಟೆ, ಆ ವಿದ್ಯಮಾನದ ನಿಜವಾದ ಸ್ವಭಾವವನ್ನು ಗ್ರಹಿಸಲು ಇದಕ್ಕಿಂತ ಹೆಚ್ಚಿನ ಪ್ರಯತ್ನವೇನೂ ಬೇಕಿಲ್ಲ ಎಂಬ ಅಸಂಬದ್ಧ ನಿಲುವು ತಳೆಯುವಂತೆ ಮಾಡಿದೆ. ಯುದ್ಧದ ಆರು ವರ್ಷಗಳ ಅವಧಿಯಲ್ಲಿ ಜಾಗತಿಕ ಮಟ್ಟದಲ್ಲಿ ಹೇಗೆ ವರ್ಗ ಮತ್ತು ರಾಜಕೀಯ ಶಕ್ತಿಗಳು ಪುನರ್ವಿಲೆಗೊಂಡವು ಮತ್ತು ಈ ಬದಲಾವಣೆ ಯುದ್ಧದ ಸ್ವಭಾವದ ಮೇಲೆ ಮತ್ತು ಅದರ ಅಂತಿಮ ಫಲಿತಾಂಶದ ಮೇಲೆ ಎಂತಹ ಆಘಾತ ಮಾಡಿತು ಎಂಬುವನ್ನು ಆತ ಗುರುತಿಸುವುದಿಲ್ಲ.

1930ರ ದಶಕ ಆರಂಭದ ಘಟನೆಗಳಾದ ಮಂಚೂರಿಯಾ ಹಾಗೂ ಚೀಣಾದೊಳಗೆ ಜಪಾನೀ ಅತಿಕ್ರಮಣದೊಂದಿಗೆ, ಸ್ಪ್ಯಾನಿಷ್ ಗಣತಂತ್ರವನ್ನು ಬುಡಮೇಲುಗೊಳಿಸಿ ಅದನ್ನು ಫ್ರಾಂಕೋನ ಫ್ಯಾಸಿಸ್ಟ್‌ಗಳಿಗೆ ಒಪ್ಪಿಸುವುದರೊಂದಿಗೆ ಮತ್ತು ಇಥಿಯೋಪಿಯಾ (ಆಗ ಅಬಿಸೀನಿಯಾ)ದೊಳಗೆ ಫ್ಯಾಸಿಸ್ಟ್ ಇಟಲಿಯ ಅತಿಕ್ರಮಣದೊಂದಿಗೆ ಎರಡನೇ ಮಹಾಯುದ್ಧದ ಆರಂಭವನ್ನು ಕಾಣಬಹುದು. 1939ರ ವೇಳೆಗೆ ಅದು ಒಂದೆಡೆ ಬ್ರಿಟಿಶ್ ಸಾಮ್ರಾಜ್ಯಶಾಹಿ ಮತ್ತು ಅದರ ಮಿತ್ರದೇಶಗಳು, ಇನ್ನೊಂದೆಡೆ ನಾಝೀ ಜರ್ಮನಿಯ ನೇತೃತ್ವದ ಫ್ಯಾಸಿಸ್ಟ್ ಬಣದ ನಡುವಿನ ಪೂರ್ಣ ಪ್ರಮಾಣದ ಯುದ್ಧವಾಗಿ ಸ್ಫೋಟಗೊಂಡಿತು.

ಕಾಂಗ್ರೆಸ್‌ನ ಪಲಾಯನ ಮತ್ತು ಭಯ

ಈ ಘಟ್ಟದಲ್ಲಿ, ಆಗಲೇ ಸ್ಥಾಪನೆಗೊಂಡಿದ್ದ ಮೆಟ್ರೊಪಾಲಿಟನ್ ಪ್ರಭುತ್ವಗಳ ಹಿತಾಸಕ್ತಿಗಳಾಗಲೀ ಅಥವಾ ವಸಾಹತುಗಳ ಮರುವಿಂಗಡಣೆಗಾಗಿ ಬಲವಂತ ಮಾಡಬೇಕೆಂದು ಅಪೇಕ್ಷಿಸಿದ್ದ ಫ್ಯಾಸಿಸ್ಟ್ ಪ್ರಭುತ್ವದ ಹಿತಾಸಕ್ತಿಗಳಾಗಲೀ ಒಟ್ಟಿನಲ್ಲಿ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳು ಪರಸ್ಪರ ಬಹಿರಂಗ ಘರ್ಷಣೆಗಿಳಿದಿದ್ದವು. ಆಗಿನ್ನೂ ನಾಝೀ ಜರ್ಮನಿ ಯುರೋಪಿನ ಮೇಲೆಲ್ಲಾ ಹರಿದಾಡಿ ಬ್ರಿಟನನ್ನು ಸುತ್ತುವರಿದ ಸಮತೋಲನವನ್ನು ಕೆಡಿಸಿರಲಿಲ್ಲ. ಇದಕ್ಕೂ ಹೆಚ್ಚು ಮಹತ್ವದ ಸಂಗತಿಯೆಂದರೆ ಸಾಮ್ರಾಜ್ಯಶಾಹೀ ಶಕ್ತಿಗಳು ತಮ್ಮೆಲ್ಲರ ಶತ್ರುವಾದ ಸಮಾಜವಾದೀ ಸೋವಿಯತ್ ಸಂಘದ ವಿರುದ್ಧ ಒಟ್ಟಾಗಿ ಕಲೆತು ಧಾಳಿ ನಡೆಸುವುದರಲ್ಲಿ ವಿಫಲವಾಗಿದ್ದವು.

> ಕಮ್ಯೂನಿಸ್ಟರನ್ನು ಸಾಮ್ರಾಜ್ಯಶಾಹಿಯ ದಳ್ಳಾಳಿಗಳು ಎಂದು ಹೆಸರು ಕೆಡಿಸಿ ಹೀನೈಸಲು ಪ್ರಯತ್ನಿಸುವುದು ಪಾಶ್ಚಿಮಾತ್ಯ ಬಂಡವಾಳಶಾಹೀ ವ್ಯವಸ್ಥೆಯಿಂದಲೇ ಹುಟ್ಟಿ ಅವರನ್ನು ನಮ್ರರಾಗಿ, ಗುಲಾಮರಂತೆ ನಕಲು ಮಾಡುವ ವಸಾಹತು ಮತ್ತು ಅರೆವಸಾಹತು ದೇಶಗಳ ಬೂರ್ಜ್ವಾಗಳ ಹೊಸದೊಂದು ಅನ್ವೇಷಣೆ. ಆದರೆ ಇಂತಹ ಕುಟಿಲ ತಂತ್ರಗಳಿಗೆ ತಾತ್ಕಾಲಿಕ ಫಲ ದೊರೆಯುತ್ತದಷ್ಟೇ.

ಈ ಘಟ್ಟ, ಸಿ. ಪಿ. ಐ. ಪ್ರಕಾರ ಬ್ರಿಟನ್ ಮೇಲೆ ನಮ್ಮ ರಾಷ್ಟ್ರೀಯ ವಿಮೋಚನಾ ಹೊಡೆತ ಕೊಡಲು ಮತ್ತು ಅದನ್ನು ಬಗ್ಗಿಸಲು ಅತ್ಯಂತ ಅನುಕೂಲ ಸಂದರ್ಭವಾಗಿತ್ತು. ಆಗ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನುಣುಚಿಕೊಳ್ಳಲು ಪ್ರಯತ್ನಿಸುತ್ತಿತ್ತು, ಜನರನ್ನು ಬೀದಿಗೆ ಕರೆತರಲು ಭಯಪಡುತ್ತಿತ್ತು ಮತ್ತು ನಮ್ರ ಮನವಿಗಳು, ತಲೆ ತಗ್ಗಿಸುವಂತಹ ಮಾತುಕತೆಗಳಲ್ಲಿ ನಂಬಿಕೆಯಿಟ್ಟಿತ್ತು. ಹೀಗೆ ಅವರು ಸಾಮ್ರಾಜ್ಯಶಾಹಿಗಳ ವಿರುದ್ಧ ನಿರ್ಣಾಯಕ ಏಟು ಕೊಡುವ, ಮುಸ್ಲಿಂ ಲೀಗ್ ರಕ್ಷಣಾತ್ಮಕವಾಗಿ ವರ್ತಿಸುವಂತೆ ಮಾಡುವ ಮತ್ತು ಬಹುಶಃ ಭಾರತದ ಕೋಮುವಾರು ವಿಭಜನೆಯ ಬ್ರಿಟಿಶ್ ಪಿತೂರಿಯನ್ನು ತಡೆಯುವ ಸಾಧ್ಯತೆಯಿದ್ದ ಅತ್ಯಂತ ಸೂಕ್ತ ಸಮಯ ಮತ್ತು ಅವಕಾಶವನ್ನು ಕಳೆಕೊಂಡರು.

.... ನಂತರ ಕಪಟ ಸಮರ ಶೀಲತೆ

1941 ರ ಮಧ್ಯದ ಹೊತ್ತಿಗೆ ಪರಿಸ್ಥಿತಿ ತೀವ್ರವಾಗಿ ಬದಲಾಗಿತ್ತು. ಅಕ್ಷಕೂಟ ಯುರೋಪನ್ನು ಅಧೀನ ಪಡಿಸಿಕೊಂಡು ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ತ್ವರಿತಗತಿಯಲ್ಲಿ ಮುನ್ನಡೆಯುತ್ತಿತ್ತು. ಸೋವಿಯತ್ ಸಂಘದ ಮೇಲೆ ದಾಳಿ ಸಾಮ್ರಾಜ್ಯಶಾಹೀ ಬಣದೊಳಗಿನ ಕಿತ್ತಾಟಗಳನ್ನು ದಮನ ಮಾಡುವಲ್ಲಿ ಫ್ಯಾಸಿಸ್ಟ್ ಶಕ್ತಿಗಳಿಗೆ ತಮ್ಮ ಸಾಮರ್ಥ್ಯದ ಬಗೆಗಿದ್ದ ಭರವಸೆಯ ಪ್ರತೀಕವಾಗಿತ್ತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಕಪಟ ಸಮರಶೀಲತೆಯ ನಿಲುವು ತಳೆಯಿತು. "ನನ್ನ ರಾಷ್ಟ್ರೀಯ ಸ್ವಾಧೀನತೆ ಮೊದಲು" ಎಂಬ ಘೋಷಣೆಯ ಮರೆಯಲ್ಲಿ ಫ್ಯಾಸಿಸಂ ಬಗ್ಗೆ ಟೀಕೆಯನ್ನು ಮೊದುಗೊಳಿಸಿದ ತನ್ನ ಸಮಯ ಸಾಧಕತನವನ್ನು ಮರೆಮಾಚಿತು.

ಸಿ. ಪಿ. ಐ ತನ್ನ ಕಾರ್ಯತಂತ್ರಗಳನ್ನು ಯುದ್ಧದ ಸ್ವಭಾವದಲ್ಲಾದ ಬದಲಾವಣೆಯನ್ನು ಸಾರಭೂತವಾಗಿ ಸರಿಯಾಗಿ ಅಂದಾಜು ಮಾಡಿಕೊಂಡೇ ವಿಕಸನಗೊಳಿಸಿತು. ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಭಾರತೀಯ ಜನತೆಯ ಹೋರಾಟವನ್ನು ಆಗ ಬೆಳೆಯುತ್ತಿದ್ದ ಫ್ಯಾಸಿಸ್ಟ್ ಪೀಡೆಯ ವಿರುದ್ಧ ಜಗತ್ತಿನ ದಾಸ್ಯಪೀಡಿತ ಜನತೆಯ ಹೋರಾಟದೊಂದಿಗೆ ಪರಿಣಾಮಕಾರಿಯಾಗಿ ಜೊತೆ ಗೂಡಿಸುವಲ್ಲಿ ತನ್ನ ಕುಂದು ಕೊರತೆಗಳು ಮತ್ತು ತಪ್ಪುಗಳ ಬಗ್ಗೆ 1948 ರಲ್ಲೇ ಸಿ. ಪಿ. ಐ. ವಿವರವಾದ ವಿಶ್ಲೇಷಣೆ ನಡೆಸಿತು. ಕಾರ್ಯತಂತ್ರಗಳಲ್ಲಿ ಸಿ. ಪಿ. ಐ. ನ ಈ ಕೊರತೆಯನ್ನು ಸಾಮ್ರಾಜ್ಯಶಾಹಿಯ ಆಧಿಪತ್ಯದ ವಿರುದ್ಧ ಮತ್ತು ಫ್ಯಾಸಿಸಂನ ಕಪಿಮುಷ್ಟಿಯಿಂದ ಮಾನವಕುಲದ ವಿಮೋಚನೆಗಾಗಿ ನಡೆಸುವ ಸಮಾನ ಹೋರಾಟದ ಈ ಎರಡು ಆವಶ್ಯಕ ಮುಖಗಳ ನಡುವಿನ ಅಂಗಾಂಗ ಸಂಬಂಧವನ್ನು ಹಿಗಳಿಯುವ ರೀತಿಯಲ್ಲಿ ವ್ಯಾಖ್ಯಿಸುವುದು ಸಾಧ್ಯವಿಲ್ಲ.

ಬೂರ್ಜ್ವಾ ಮುಖಂಡರು ಮತ್ತು ಅವರ ಸಿದ್ಧಾಂತಿಗಳು, ಇದಕ್ಕೆ ಬದಲಾಗಿ, ಯುದ್ಧದ ಮೊದಲ ಅಂತರ-ಸಾಮ್ರಾಜ್ಯಶಾಹೀ ಘಟ್ಟದಲ್ಲಿ ಸಾಮ್ರಾಜ್ಯ-ವಿರೋಧಿ ಸಾಮೂಹಿಕ ಹೊಡೆತವನ್ನು ತಾವು ಬುಡಮೇಲು ಮಾಡಿದ್ದನ್ನು ನಾಚಿಕೆಯಿಲ್ಲದೆ ಸಮರ್ಥಿಸಿಕೊಳ್ಳುತ್ತಾರೆ. ಮತ್ತು ಜಾಗತಿಕ ಮಟ್ಟದಲ್ಲಿ ನಡೆದ ಭಯಾನಕ ಫ್ಯಾಸಿಸ್ಟ್—ವಿರೋಧೀ ಹೋರಾಟದ ಎರಡನೇ ಘಟ್ಟದಲ್ಲಿ ತಮ್ಮ ನಿಲುವು ತಿರುಗುಮುರುಗಾಯಿತೇಕೆ ಎಂಬುದರ ವಿಮರ್ಶಾತ್ಮಕ ಮೌಲ್ಯಮಾಪನ ಮಾಡುವುದಕ್ಕೆ ಹಿಂದೇಟು ಹಾಕುತ್ತಾರೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಆರು ವರ್ಷಗಳ ಅಕ್ಷಮ್ಯ ಓಲಾಟ ದುಸ್ಸಾಹಸ ಮತ್ತು ತೀವ್ರ ರಾಜಕೀಯ ಗೊಂದಲವನ್ನು ಚೆನ್ನಾಗಿ ತಿಪ್ಪೆ ಸಾರಿಸಿ ಮರೆಮಾಚಲಾಗುತ್ತದೆ. ಪ್ರಥಮ ಮಹಾಯುದ್ಧದ ಅವಧಿಯಲ್ಲಿ ಬ್ರಿಟಿಶರ ಸ್ವಯಂಘೋಷಿತ ಸೇನಾ ಭರ್ತಿದಾರ ಸಾರ್ಜೆಂಟ್‌ಗಳಾಗಿ ವರ್ತಿಸಿದವರ ಪಾತ್ರವನ್ನು ಪರಿಶೀಲಿಸುವಾಗ ಯಾವ ನೈತಿಕ ನಿಯಮಾವಳಿಯೂ ನೆನಪಾಗುವುದಿಲ್ಲ. ಆದರೆ ಸಿ. ಪಿ. ಐ. ಹೊಸದೊಂದು ರಾಜಕೀಯ-ಕಾರ್ಯತಂತ್ರಾತ್ಮಕ ನಿಲುವನ್ನು ಚರ್ಚಿಸಿ ನಿರ್ಧರಿಸುವಲ್ಲಿ ಆದ ಆರು ತಿಂಗಳ ವಿಳಂಬವನ್ನು ಮಾತ್ರ "ಮಾಸ್ಕೋದಿಂದ ಆಜ್ಞೆಗಾಗಿ ಕಾಯುತ್ತಿದ್ದರು" ಎಂದು ಹೀಗೆಳೆಯಲಾಗುತ್ತದೆ. ಯುದ್ಧದ ಸ್ವಭಾವದಲ್ಲಾದ ಬದಲಾವಣೆಯನ್ನು ಬೂರ್ಜ್ವಾಗಳಿಗಿಂತ ಭಿನ್ನವಾದ ರೀತಿಯಲ್ಲಿ ಅಂದಾಜು ಮಾಡಿದ್ದರಿಂದ ಮೂಡಿಬಂದ ಕಾರ್ಯತಂತ್ರಗಳನ್ನು ವಿಶ್ವಾಸಘಾತ ಎನ್ನಲಾಗುತ್ತದೆ! ಸಿ. ಪಿ. ಐ. ವಿರುದ್ಧ ಈ ವಿಷಪೂರಿತ ವಾಗ್ವಾದದಲ್ಲಿ ಹೊಸದಾಗಿ ಬಳಸಲಾದ ನೈತಿಕಮಾನದಂಡಗಳು ಇಂತಹವೇ.

ಸಾಂಕ್ರಾಮಿಕ ಬೂರ್ಜ್ವಾ ಕಾಯಿಲೆ

ಕಮ್ಯೂನಿಸ್ಟರನ್ನು ಸಾಮ್ರಾಜ್ಯಶಾಹಿಯ ದಳ್ಳಾಳಿಗಳು ಎಂದು ಹೆಸರು ಕೆಡಿಸಿ ಹೀನೈಸಲು ಪ್ರಯತ್ನಿಸುವುದು ಪಾಶ್ಚಿಮಾತ್ಯ ಬಂಡವಾಳಶಾಹೀ ವ್ಯವಸ್ಥೆಯಿಂದಲೇ ಹುಟ್ಟಿ, ಅವರನ್ನು ನಮ್ರರಾಗಿ, ಗುಲಾಮರಂತೆ ನಕಲು ಮಾಡುವ ವಸಾಹತು ಮತ್ತು ಅರೆವಸಾಹತು ದೇಶಗಳ ಬೂರ್ಜ್ವಾಗಳ ಹೊಸದೊಂದು ಅನ್ವೇಷಣೆ. ಆದರೆ ಇಂತಹ ಕುಟಿಲ ತಂತ್ರಗಳಿಗೆ ತಾತ್ಕಾಲಿಕ ಫಲ ದೊರೆಯುತ್ತದಷ್ಟೆ. ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಶೋಷಣಾಮಯ ವ್ಯವಸ್ಥೆಯ ವಿರುದ್ಧ ನಿಸ್ಸ

[6ನೇ ಪುಟ ನೋಡಿ]

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು

(5ನೇ ಪುಟದಿಂದ)

ತ್ತೀವೆ ಎಂದು ಸಾಧಿಸಿ ತೋರಿಸಿದವರು ಕಮ್ಯೂನಿಸ್ಟರು ಮಾತ್ರ ಎಂಬ ಸತ್ಯಕ್ಕೆ ಮಸಿ ಬಳಿಯಲು ಅದಕ್ಕೆ ಸಾಧ್ಯವಿಲ್ಲ. ಈ ಸತ್ಯ ಶ್ರಮ ಜೀವಿ ಜನತೆ ಅನುಭವದಿಂದ ಕಂಡುಕೊಂಡ ಜೀವನದ ವಾಸ್ತವ ಸಂಗತಿಯಾದ್ದರಿಂದಲೇ ಕಮ್ಯೂನಿಸ್ಟರು ಜಗತ್ತಿನ ಶೋಷಿತರ ಆದರ ಮತ್ತು ಬೆಂಬಲ ಗಳಿಸಿದ್ದಾರೆ. ಹಾಗೂ ಪಟ್ಟ ಭದ್ರಹಿತಾಸಕ್ತಿಗಳ ದ್ವೇಷ ಕಟ್ಟಿಕೊಂಡಿದ್ದಾರೆ. ಈ ಸತ್ಯಕ್ಕಾಗಿಯೇ ಜಗತ್ತಿನಾದ್ಯಂತ ಲಕ್ಷಗಟ್ಟಲೆ ಕಮ್ಯೂನಿಸ್ಟರ ಮೇಲೆ ಮಿಥ್ಯಾಪವಾದ ಹೊರಿಸಲಾಗಿದೆ, ಅವರನ್ನು ಸೆರೆಮನೆಗೆ ಅಟ್ಟಲಾಗಿದೆ, ಚಿತ್ರಹಿಂಸೆ ಮಾಡಲಾಗಿದೆ ಮತ್ತು ಕೊಲ್ಲಲಾಗಿದೆ. ಈ ಸತ್ಯದಿಂದಾಗಿಯೇ ಜಗತ್ತಿನ ಇತಿಹಾಸದ ಪುಟಗಳಲ್ಲಿ ಬೇರೆ ಯಾವ ವಿಚಾರ ಧಾರೆಯೂ ತ್ವರಿತಗತಿಯಿಂದ ಸಾಗದ ರೀತಿಯಲ್ಲಿ ಮಾರ್ಕ್ಸ್‌ವಾದ ದಾಪುಗಾಲು ಇಟ್ಟು ಮುಂದೆ ಸಾಗುತ್ತಿರುವುದು. ತಮ್ಮನ್ನು ದೃಢವಾಗಿ ಸಮರ್ಪಿಸಿಕೊಂಡ ಧ್ಯೇಯಕ್ಕೆ ಅಂದರೆ ಕಾರ್ಮಿಕವರ್ಗ ಮತ್ತು ಸಮಸ್ತ ಮಾನವ ಕುಲವನ್ನು ಶೋಷಣೆಯಿಂದ ಮತ್ತು ಕೂಲಿ ಗುಲಾಮಿಕೆಯಿಂದ ವಿಮೋಚನೆ ಗೊಳಿಸುವ ಧ್ಯೇಯದ ಸಾಧನೆಗಾಗಿ ಲಕ್ಷಗಟ್ಟಲೆ ಸಂಖ್ಯೆಯಲ್ಲಿ ತಮ್ಮ ಪ್ರಾಣಾರ್ಪಣೆ ಮಾಡಿದ ಪುರುಷರು ಮತ್ತು ಮಹಿಳೆಯರಲ್ಲಿ ಕಮ್ಯೂನಿಸ್ಟರ ವಿನಃ ಬೇರೆ ಯಾರೂ ಇಲ್ಲ.

ಕಮ್ಯೂನಿಸಂ ವಿರೋಧವೆಂಬುದು ಪ್ರತಿದಿನ ಕೊಳೆಯುತ್ತಿರುವ ಬಂಡವಾಳಶಾಹೀ ಸಮಾಜ ವ್ಯವಸ್ಥೆಯ ಆಶ್ರಯದಲ್ಲಿರುವ ತೀವ್ರ ಸಾಂಕ್ರಾಮಿಕ ಕಾಯಿಲೆ ಒಂದು ರಾಜಕೀಯ ಆರ್ಥಿಕ ವ್ಯವಸ್ಥೆಯಾಗಿ ಬದುಕಿ ಬೆಳೆಯುವ ತನ್ನ ಸಾಧ್ಯತೆಗಳನ್ನು ಕಳೆಕೊಂಡ ಈ ವ್ಯವಸ್ಥೆಯ ಪ್ರತಿಪಾದಕರು ಕಮ್ಯುನಿಸ್ಟರ ವಿರುದ್ಧ ಮಿಥ್ಯಾಪವಾದ, ನಿಂದೆ, ಸುಳ್ಳಿನ ಕಂತೆ ಮತ್ತು ದೈಹಿಕ ಹಲ್ಲೆ ಮುಂತಾದ ಹೊಸ ಹೀನ ಆಯುಧಗಳನ್ನು ಸೃಷ್ಟಿಸಿದ್ದಾರೆ.

ಸಾಮ್ರಾಜ್ಯಶಾಹಿಗಳ ಅನುಕರಣೆ

ಭಾರತದಲ್ಲಿ ಕಮ್ಯೂನಿಸಂನ ಕಟು ವಿರೋಧ ಹುಟ್ಟಿದ್ದು ಬ್ರಿಟಿಶ್ ಸಾಮ್ರಾಜ್ಯಶಾಹಿ ಆಳರಸರ ವರ್ಗ ದೃಷ್ಟಿಕೋನಗಳು ಮತ್ತು ಭೀತಿಗಳಲ್ಲಿ. ವಿವಿಧ ಕಮ್ಯುನಿಸ್ಟ್ ಗುಂಪುಗಳು ಒಟ್ಟು ಸೇರಿ ಒಂದು ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಬಿಂದು ರೂಪುಗೊಳ್ಳುವ ಮೊದಲೇ ಇದು ಆರಂಭವಾಯಿತು. ನಿಜವಾದ ಮತ್ತು ಕಾಲ್ಪನಿಕ ಕಾರಣಗಳಿಗಾಗಿ ಕಮ್ಯುನಿಸ್ಟರ ಬೆನ್ನು ಹತ್ತಿ ಕಿರುಕುಳ ಕೊಡುವುದು ಒಂದು ಉದ್ದೇಶಪೂರ್ಣ ಧೋರಣೆಯಾಗಿತ್ತು ಎಂಬುದು ಪೇಷಾವರ್, ಕಾನ್‌ಪುರ್, ಮೀರತ್ ಮತ್ತು ಮದ್ರಾಸ್ ಪಿತೂರಿ ಮೊಕದ್ದಮೆಗಳಿಂದ ಸ್ವಯಂವೇದ್ಯ. ಇವುಗಳಲ್ಲಿ ಹತ್ತಾರು ಕಮ್ಯುನಿಸ್ಟ್ ವಿಚಾರದ ಯುವಕರನ್ನು ಸಿಕ್ಕಿಸಿಹಾಕಲಾಯಿತು. ಆಗಷ್ಟೇ ಗರಿಗೂಡಿಸಿಕೊಳ್ಳುತ್ತಿದ್ದ ಕಮ್ಯೂನಿಸ್ಟ್ ಪಕ್ಷವನ್ನು ಕಾನೂನು ಬಾಹಿರ ಎಂದು ಘೋಷಿಸಲಾಯಿತು. ಅದು ಬ್ರಿಟಿಶ್ ಆಳ್ವಿಕೆಯ ಅವಧಿಯಲ್ಲಿ ಬಹುಕಾಲ ನಿಷೇಧಕ್ಕೊಳಗಾಗಿಯೇ ಉಳಿಯಿತು. ಬ್ರಿಟಿಶ್ ಕೇಂದ್ರ ಸರಕಾರದ ಗೃಹ ಮಂತ್ರಾಲಯಕ್ಕೆ ಕಮ್ಯುನಿಸ್ಟರ ಮೇಲೆ ಕಣ್ಣಿಡಲು ವಿಶೇಷ ನಿರ್ದೇಶನ ನೀಡಲಾಗಿತ್ತು.

ರಾಷ್ಟ್ರೀಯ ಕಾಂಗ್ರೆಸ್ ನಾಯಕರು ಇತರ ಹೆಚ್ಚಿನ ವಿಷಯಗಳಂತೆ ಇದರಲ್ಲಿಯೂ ಸಾಮ್ರಾಜ್ಯಶಾಹಿಗಳಿಂದಲೇ ಸೂಚನೆ ಪಡೆಕೊಂಡರು. ಅವರು ಮಾರ್ಕ್ಸ್‌ವಾದ-ಲೆನಿನ್‌ವಾದದ ಬಗ್ಗೆ ತಮ್ಮ ಅತೀವ ಅರುಚಿ ಅಷ್ಟೇ ಅಲ್ಲ ದ್ವೇಷವನ್ನು ಬಚ್ಚಿಡಲಿಲ್ಲ. ಪ್ರಾಚೀನ ಧರ್ಮ ಗ್ರಂಥಗಳಿಗೆ ವಿರೋಧಿಯಾದ್ದರಿಂದ ಅದು ರಾಷ್ಟ್ರ ವಿರೋಧಿ ಎಂದು ಘೋಷಿಸಿದರು. ರಾಷ್ಟ್ರೀಯ ಸಂಸ್ಕೃತಿ ಮತ್ತು ನಾಗರಿಕತೆ ಹಾಗೂ ಧಾರ್ಮಿಕ ಪರಿಕಲ್ಪನೆಗಳು ಒಂದೇ ಎಂದು ಗುರುತಿಸುವ ಪ್ರಗತಿವಿರೋಧಿ ಕುರುಡು ದೃಷ್ಟಿಕೋನದಲ್ಲಿ ಅಡಕವಾಗಿರುವ ಈ ಸಂಪ್ರದಾಯ ಶರಣತೆ ಮುಂದೆ ರಾಷ್ಟ್ರೀಯತೆ ಮತ್ತು ಜನಾಂಗ ಲಕ್ಷಣದ ಬಗ್ಗೆ ಕಾಂಗ್ರೆಸ್ ನಿಲುವಿನ ಪ್ರಮುಖ ಲಕ್ಷಣವಾಯಿತು. ಮಾರ್ಕ್ಸ್‌ವಾದಿ - ಲೆನಿನ್‌ವಾದಿ ಸಿದ್ಧಾಂತ, ವಿಶೇಷವಾಗಿ ಅದರ ಆರ್ಥಿಕ ಅಂಶದ ಬಗ್ಗೆ ಹೇರಳವಾಗಿ ಬರೆದಿರುವ ಪಂಡಿತ್ ಜವಾಹರ್‌ಲಾಲ್ ನೆಹರೂ ಕೂಡಾ ಕಮ್ಯುನಿಸಂನ ಧ್ಯೇಯದ ಬಗ್ಗೆ ತನ್ನ ಜನ್ಮಸಿದ್ಧ ವೈಷಮ್ಯವನ್ನು ಬಚ್ಚಿಡಲಿಲ್ಲ. 1959 ರಲ್ಲಿ ಕೇರಳದ ಕಮ್ಯುನಿಸ್ಟ್ ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿದ ಬಗ್ಗೆ ಸಂಸತ್ತಿನಲ್ಲಿ ನಡೆದ ಚರ್ಚೆಯ ಸಂದರ್ಭದಲ್ಲಿ ಎಂದೇ ಆಗಲಿ ತನಗೆ ಭಾರತದಲ್ಲಿ ಕಮ್ಯೂನಿಸ್ಟರ ಆಳ್ವಿಕೆಗಿಂತ ಜನಸಂಘದ ಆಳ್ವಿಕೆಯೇ ಆಗ ಬಹುದು ಎಂದು ಸ್ಪಷ್ಟಪಡಿಸಿದ್ದರು. ಯಾಕೆಂದರೆ ಜನಸಂಘ ಸ್ವಾಭಾವಿಕವಾಗಿಯೇ ರಾಷ್ಟ್ರೀಯವಾಗಿದ್ದರೆ ಕಮ್ಯುನಿಸ್ಟರು ಇಂತಹದೊಂದು "ರಾಷ್ಟ್ರೀಯ ವೈಲಕ್ಷಣತೆ" ಯ ಪ್ರತಿನಿಧಿಗಳಾಗಿಲ್ಲವಂತೆ.

ಶೌರಿಗೆ ಬೇಕಿಲ್ಲದ ಈ ಕುಕೃತ್ಯಗಳು

ಬ್ರಿಟಿಶ್ ಆಳ್ವಿಕೆಯ ವಿರುದ್ಧ ತನ್ನ ಹೋರಾಟಕ್ಕೆ ಸಂಬಂಧಪಟ್ಟಂತೆ ಕಾಂಗ್ರೆಸ್ ಸತ್ಯ ಮತ್ತು ಅಹಿಂಸಾ ತತ್ತ್ವದ ಪ್ರತಿಜ್ಞೆ ಮಾಡಿತ್ತು. ಜನಪ್ರಿಯ ಹೋರಾಟಗಳ ಅವಧಿಯಲ್ಲಿ ಏನಾದರೂ "ಹಿಂಸೆ" ನಡೆದರೆ ಕಾಂಗ್ರೆಸ್ಸಿನ ಆತ್ಮವನ್ನು ಶುದ್ಧ ಗೊಳಿಸಲು ಹಲವು ಉಪವಾಸಗಳನ್ನೂ ಗಾಂಧೀಜಿ ಕೈಗೊಂಡರು. ಬ್ರಿಟಿಶ್ ಆಳ್ವಿಕೆಯ ವಿರುದ್ಧ ಸಮೂಹಿಕ ಹೋರಾಟಗಳಲ್ಲಿ ಒಂದೆರಡು ಕಡೆಯಷ್ಟೇ "ಹಿಂಸೆ" ನಡೆದರೂ ಕಾರ್ಯಾಚರಣೆಯ ಕಾರ್ಯಕ್ರಮವನ್ನೇ ವಾಪಾಸು ಪಡೆಯುವಷ್ಟು ತೀವ್ರ ಕ್ರಮಗಳನ್ನು ಅದು ಕೈಗೊಂಡಿತು.

ಆದರೆ ಅಹಿಂಸಾ ತತ್ತ್ವದ ಇವೇ ಪುತ್ಥಳಿಗಳು ನೂರಾರು ಕಮ್ಯೂನಿಸ್ಟ್ ಸಭೆಗಳು ಮತ್ತು ಪ್ರದರ್ಶನಗಳ ಮೇಲೆ ಪಕ್ಷದ ಪತ್ರಿಕೆಗಳನ್ನು ಮಾರುತ್ತಿದ್ದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದರೆ, ವೈಯಕ್ತಿಕವಾಗಿ ಕಮ್ಯುನಿಸ್ಟರನ್ನು ಹೊಡೆದರೆ ಅದಕ್ಕೆ ಅಸಹ್ಯಪಡುತ್ತಿರಲಿಲ್ಲ. ಆಂಧ್ರ, ಬಂಗಾಲ, ಕೇರಳ, ತಮಿಳುನಾಡು, ಮುಂಬೈ ಮತ್ತು ದೇಶದ ಪ್ರತಿಯೊಂದೆಡೆಯೂ ಇವು ನಡೆದವು. ಸಿಪಿಐ ವಿರುದ್ಧ ಕಾಂಗ್ರೆಸ್ ನಡೆಸುತ್ತಿದ್ದ ಇಂತಹ ಗೂಂಡಾ ಧಾಳಿಗಳು 1946 ರ ಜನವರಿ 26 ರಂದು ಮುಂಬೈಯಲ್ಲಿ ಕಮ್ಯುನಿಸ್ಟ್ ಪಕ್ಷದ ಮುಖ್ಯ ಕಾರ್ಯಾಲಕ್ಕೆ ಹಾಕಿದ ಆರು ಗಂಟೆಗಳ ಮುತ್ತಿಗೆ ಮತ್ತು ಹಲ್ಲೆಯೊಂದಿಗೆ ತಾರಕಕ್ಕೇರಿದವು. ಈ ಘಟನೆಯಲ್ಲಿ 60 ಕಮ್ಯುನಿಸ್ಟರು ಗಾಯಗೊಂಡರು, ಒಂದು ಲಕ್ಷಕ್ಕೂ ಹೆಚ್ಚು ಬೆಲೆಯ ಆಸ್ತಿಯನ್ನು ಹಾಳುಗೆಡವಲಾಯ್ತು.

ಕಮ್ಯೂನಿಸ್ಟರನ್ನು ಲೈಂಗಿಕ ಸ್ವೇಚ್ಛಾಚಾರದ ಪ್ರತಿಪಾದಕರು, ರಕ್ತಪಿಪಾಸು ರೌಡಿಗಳು, ಪೂಜಾಸ್ಥಳಗಳನ್ನು ಧ್ವಂಸಗೊಳಿಸಿದವರು ಮತ್ತು ಬ್ರಿಟಿಶ್ ಸಾಮ್ರಾಜ್ಯಶಾಹಿಗೆ ತಮ್ಮನ್ನು ಮಾರಿಕೊಂಡವರು ಎಂದೆಲ್ಲಾ ಚಿತ್ರಿಸುವ ನೂರಾರು ಟನ್ನುಗಟ್ಟಲೆ ಸಾಹಿತ್ಯವನ್ನು ಕಾಂಗ್ರೆಸ್ ಉತ್ಪಾದಿಸಿ, ಹಂಚಿತು. ಕಮ್ಯುನಿಸ್ಟರನ್ನು ಅನೈತಿಕ ಹುಚ್ಚರು ಮತ್ತು ಸಾಮ್ರಾಜ್ಯಶಾಹಿಯ ಪಳ್ಳಾಳಿಗಳು ಎಂದು ತೋರಿಸುವ "ನಾಟಕ" ಗಳನ್ನು ನಮ್ಮಲ್ಲೇ ಬಹಳ ಜನ ಸ್ವತಃ ನೋಡಿದ್ದೇವೆ. ಆದರೆ ಈ ಇವೆಲ್ಲವುಗಳಲ್ಲಿ ಒಂದರ ವಿರುದ್ಧವೂ, 1944-45 ರಲ್ಲಿ ಜೈಲಿನಿಂದ ತಾವು ಬಿಡುಗಡೆಯಾದ ನಂತರ ಕೂಡಾ ಕಾಂಗ್ರೆಸ್ ಮುಂದಾಳುಗಳು ಪ್ರತಿಭಟಿಸಲಿಲ್ಲ. ನಮ್ಮ ಜನರ ನಡುವೆ ಕಮ್ಯುನಿಸ್ಟರ ಇಮೇಜನ್ನು ಹಾಳುಗೆಡಹುವುದಕ್ಕಾಗಿಯೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಅದರ ಉಪವಾಹಿನಿಗಳು ನಮ್ಮ ವಿರುದ್ಧ ವ್ಯಾಪಕ ಪ್ರಮಾಣದಲ್ಲಿ ಮಿಥ್ಯಾಪವಾದ ಹೊರಿಸಿದವು, ದ್ವೇಷ ಹರಡಿದವು ಎಂಬುದು ನಿಸ್ಸಂಶಯ. ಈ ಮೂಲಕ ಸಾಮ್ರಾಜ್ಯಶಾಹಿಗಳು ಅತ್ಯಂತ ನಿಪುಣತೆಯಿಂದ ಸೃಷ್ಟಿಸಿದ ಕೋಮುವಾರು ವಿಭಜನೆ, ಅದರ ಬೆನ್ನ ಹಿಂದೆಯೇ ನಡೆದ ವ್ಯಾಪಕ ಪ್ರಮಾಣದ ಸಾಮೂಹಿಕ ಕೋಮು ಹತ್ಯೆಗಳು ಮತ್ತು ವಲಸೆಗಳೂ ಸೇರಿದಂತೆ ನಡೆದ ಎಲ್ಲಾ ಘಟನೆಗಳಿಂದ ತಮ್ಮ ಹೊಣೆಗಾರಿಕೆ ತಪ್ಪಿಸಿಕೊಳ್ಳಲು ಸಾಧ್ಯ ಎಂದು ಕಾಂಗ್ರೆಸ್ ಮುಖಂಡತ್ವ ಬಗೆಯಿತು. ಪತ್ರಾಗಾರಗಳಲ್ಲಿದ್ದ ಈ ಎಲ್ಲಾ ಸಕಲ ಸಾಕ್ಷ್ಯಾಧಾರಪೂರಿತ ಕುಕೃತ್ಯಗಳು ಶ್ರೀಮಾನ್ ಅರುಣ್ ಶೌರಿಯ ಕಣ್ಣಿಗೆ ಏಕೆ ಬೀಳಲಿಲ್ಲವೋ !

(ಮುಂದುವರಿಯುವುದು)

ಪೌರ ಕಾರ್ಮಿಕರ ದೀರ್ಘ ಹೋರಾಟ ಯಶಸ್ವಿ—

ಮೈಸೂರು ನಗರ ಪೌರ ಕಾರ್ಮಿಕರು ಕಳೆದ 3ವರ್ಷಗಳಿಂದ ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯೀಸ್ ಯೂನಿಯನ್(ಸಿ.ಐ.ಟಿ.ಯು.)ನೇತೃತ್ವದಲ್ಲಿ ದಿನ ಕೂಲಿ ಪೌರ ಕಾರ್ಮಿಕರ ಕೆಲಸ ಖಾಯಂಗೊಳಿಸಲು ಒತ್ತಾಯಿಸಿ ನಡೆಸಿದ ದಿಟ್ಟ ಹೋರಾಟ ಯಶಸ್ವಿಯಾಗಿದ್ದು ಕಾರ್ಪೊರೇಷನ್ ಆಡಳಿತ ವರ್ಗವು 25-7-84 ರಿಂದ 102 ಜನ ಕೂಲಿ ಪೌರ ಕಾರ್ಮಿಕರ ಕೆಲಸವನ್ನು ಖಾಯಂಗೊಳಿಸಿದೆ.

ಪೌರ ಕಾರ್ಮಿಕರ ಈ ಹೋರಾಟಕ್ಕೆ ಬೆಂಬಲ ಸೂಚಿಸಿದ ಪೌರ ಕಾರ್ಮಿಕರಿಗೆ ಹಾಗೂ ನಾಗರಿಕರಿಗೆ ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯಿಸ್ ಯೂನಿಯನ್ ಕೃತಜ್ಞತೆ ಸಲ್ಲಿಸುತ್ತದೆ— ಎಂದು ಕಾರ್ಯದರ್ಶಿ ಕಾಂ. ಸಿ. ಕೆ. ಮೋಹನ್ ತಿಳಿಸಿದ್ದಾರೆ.

ಹನುಮಾಲಿ ಕಾರ್ಮಿಕ ಸಂಘದ ಸರ್ವ ಸದಸ್ಯರ ಸಭೆ

ದಿನಾಂಕ 22-7-84 ರಂದು ಹನುಮಾಲಿ ಕಾರ್ಮಿಕ ಸಂಘದ ಸರ್ವ ಸದಸ್ಯರ ಸಭೆಯು ಸ್ಥಳೀಯ ಪ್ರವಾಸ ಮಂದಿರದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು. ರಾಯಚೂರು ಜಿಲ್ಲಾ ಸಮಿತಿ ಅಧ್ಯಕ್ಷ ಕಾಂ. ಪುರುಷೋತ್ತಮ ಕಲಾಲ್ ಅವರು ವಹಿಸಿದ್ದರು. ಸಭೆಯಲ್ಲಿ ಕಾಂ. ಶಾಮಣ್ಣ, ಕಾಂ. ಬಾಷುಮಿಯಾ, ಅವರುಗಳು ಮಾತನಾಡಿದರು

ಸಂಘದ ಕಾರ್ಯದರ್ಶಿ, C.S. ಹಿರೇ ಮಠರವರು ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರವನ್ನು ಮಂಡಿಸಿದರು. ನಂತರ 84-85 ನೇ ಸಾಲಿನ ತಾಲೂಕ್ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಜಿ ಮಂತನಗೌಡ ಅಧ್ಯಕ್ಷರು, ಖಾಜಾಸಾಬ್, ಲಿಂಗಪ್ಪ, ಮತ್ತು ಪರಮಣ್ಣ ಉಪಾಧ್ಯಕ್ಷರು— C.S. ಹಿರೆ ಮಠ ಪ್ರಧಾನ ಕಾರ್ಯದರ್ಶಿ, ಮರಿಯಪ್ಪ, ದೇವಪ್ಪ, ಕಾರ್ಯದರ್ಶಿಯಾಗಿಯು ಮತ್ತು ಭಾಷಮಿಯಾ ಖಜಾಂಚಿ, ಹಾಗೂ 13 ಜನ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಆಯ್ಕೆಯಾದರು.

ರಾಯಚೂರಿನಲ್ಲಿ ಪಂಜಾಬ್ ಸಪ್ತಾಹ ಆಚರಣೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಕರೆಯ ಮೇರೆಗೆ ಜೂನ್ 10 ರಿಂದ 17 ರವರೆಗೆ ರಾಯಚೂರಿನ ಸಿ. ಪಿ. ಐ. (ಎಂ) ನಗರ ಸಮಿತಿ ಸಪ್ತಾಹವನ್ನು ಆಚರಿಸಿತು.

ದಿನಾಂಕ 10-7-84 ರಂದು ಉದ್ಘಾಟನಾ ಕಾರ್ಯಕ್ರಮ ಪಕ್ಷದ ಆಫೀಸಿನಲ್ಲಿ ಆಯಿತು ಕಾ। ಪುರುಷೋತ್ತಮ ಇವರು ಪಂಜಾಬ ಸಮಸ್ಯೆ ಕುರಿತು ಪಕ್ಷದ ನಿಲುವೆಯನ್ನು ಸ್ಪಷ್ಟಪಡಿಸಿದರು.

13 ನೇ ತಾರೀಖಿನಂದು ಕಾಟೇದರವಾಜದಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿ 300 ಜನ ಸೇರಿದ ಸಭೆಯಲ್ಲಿ D.Y.F.I. ಪರಿಯಿಂದ ರಾಘವೇಂದ್ರ ಕುಷ್ಟಗಿ ಮತ್ತು ಪಕ್ಷದ ಪರಿಯಿಂದ ಕೆ.ಪುರುಷೋತ್ತಮ ಇವರು ಮಾತನಾಡಿದರು.

15-7-84 ರಂದು ಕರ್ನಾಟಕ ಸಂಘದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸುಮಾರು 100 ಜನರು ಭಾಗವಹಿಸಿದ್ದ ಸಭೆಯನ್ನುದ್ದೇಶಿಸಿ, ಕಾ॥ ಕೆ. ಪುರುಷೋತ್ತಮ, ರಾಘವೇಂದ್ರ ಕುಷ್ಟಗಿ ಇವರು ಮಾತನಾಡಿದರು.

ಸಾರ್ವಜನಿಕರ ಒತ್ತಾಯ

ಶಿಡ್ಲಘಟ್ಟ ಪಟ್ಟಣದ ಮಧ್ಯಭಾಗದಲ್ಲೊಂದು ಸಾರಾಯಿ ಅಂಗಡಿ ಇದೆ. ಇದರ ಸುತ್ತ ಮುತ್ತ ಶಾಲೆ,ಕುಡಿಯುವ ನೀರಿನ ಭಾವಿ, ಹರಿಜನ ಕಾಲೋನಿ ಇತ್ಯಾದಿ ಇದ್ದು, ಸರ್ಕಾರಿ ಕಛೇರಿ, ನ್ಯಾಯಾಲಯ, ಆಸ್ಪತ್ರೆ, ಬಸ್ ನಿಲ್ದಾಣಕ್ಕೆ ಈ ಮಾರ್ಗದಿಂದಲೇ ಹೋಗಬೇಕಾಗುತ್ತದೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆಂದು, ಸಾರಾಯಿ ಅಂಗಡಿಯನ್ನು ಇಲ್ಲಿಂದ ಎತ್ತಂಗಡಿ ಮಾಡಬೇಕೆಂದು ಊರಿನ ನಾಗರೀಕರು ಜಿಲ್ಲಾಧಿಕಾರಿ [ಅಬ್ಕಾರಿ] ಮತ್ತು ಅಬಕಾರಿ ಸೂಪರಿಂಟೆಂಡೆಂಟ್‌ರವರಿಗೂ ಕೆಲವು ತಿಂಗಳ ಹಿಂದೆ ಮನವಿಯನ್ನು ಅರ್ಪಿಸಿದ್ದರು. ಆದರೆ ಇದುವರೆಗೂ ಅಧಿಕಾರಿಗಳು ಇತ್ತ ಕಡೆ ಗಮನ ಕೊಡದೆ ಇದ್ದುದರಿಂದ ತಾ. 30-7-84 ರಂದು ಸಿ. ಪಿ. ಐ (ಎಂ) ನ ನೇತೃತ್ವದಲ್ಲಿ ಪುರಸಭಾ ಕಛೇರಿಯ ಎದುರು "ಧರಣಿ" ನಡೆಸಲಾಯಿತು.

ಅಂತರ್ರಾಷ್ಟ್ರೀಯ

ಬೊಲಿವಿಯಾ - ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಸವಾಲು

ಬೊಲಿವಿಯಾದ ಲಾಪಾಜ್‌ನಲ್ಲಿ ಜೂನ್ 30 ಮತ್ತು ಜುಲೈ 1 ರಂದು ನಡೆದ ಹಠಾತ್ ಬೆಳವಣಿಗೆಗಳು ಅನಿರೀಕ್ಷಿತವಾಗಿರಲಿಲ್ಲ. 1982 ರಲ್ಲಿ ನಡೆದ ಚುನಾವಣೆಗಳಲ್ಲಿ ಗೆದ್ದು ಅಧಿಕಾರಕ್ಕೆ ಬಂದ ಹೆರ್ನನ್ ಸೈಲ್ಸ್ ಜು ಅ ಜೊ ಅವರ ನಾಗರೀಕ ಸರ್ಕಾರ ಬಂದಾಗಿನಿಂದಲೂ ಅದನ್ನು ಕಿತ್ತೊಗೆದು ಪುನಃ ಮಿಲಿಟರಿ ಸರ್ವಾಧಿಕಾರ ಸ್ಥಾಪಿಸಲು, ಜಾರಿಗೆ ತಂದಿದ್ದ ಪ್ರಗತಿಪರ ನೀತಿಗಳನ್ನು ತಡೆ ಹಿಡಿಯಲು ಮತ್ತು ಅಮೆರಿಕನ್ ಸಾಮ್ರಾಜ್ಯ ಶಾಹಿಯ ಕೈಗೊಂಬೆ ಸರಕಾರವನ್ನು ತರಲು ಪ್ರಯತ್ನಗಳು ನಡೆದೇ ಇದ್ದವು. ಚುನಾಯಿತ ಸರ್ಕಾರವನ್ನು ಉರುಳಿಸುವ ಪ್ರಯತ್ನ ಬೊಲಿವಿಯಾದಲ್ಲಿ ನಿರಂತರವಾಗಿ ನಡೆದೇ ಇದೆ.

ಬಹು ರಾಷ್ಟ್ರೀಯ ಸಂಸ್ಥೆಗಳ ಆಸಕ್ತಿ

ಪ್ರಮುಖವಾಗಿ ಕಚ್ಚಾ ವಸ್ತುಗಳನ್ನು ರಫ್ತು ಮಾಡುವ ಬೊಲಿವಿಯಾ ಬಗ್ಗೆ ಅಮೆರಿಕದ ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ವಿಶೇಷ ಆಸಕ್ತಿ. ಅದರಿಂದಾಗಿ ತಮ್ಮ ಆಸಕ್ತಿಗೆ ಪೂರಕವಾದ ಸರ್ಕಾರಗಳನ್ನು ತರುವಲ್ಲಿ ಪ್ರಯತ್ನಿಸುತ್ತಿವೆ. ಈ ದಿಕ್ಕಿನಲ್ಲಿ ಬಹಳ ಕಾಲದಿಂದಲೂ ಇವು ಯಶಸ್ವಿಯಾಗಿದ್ದವು. ಆದರೆ 1982 ರಲ್ಲಿ ಪರಿಸ್ಥಿತಿ ವಿಚಿತ್ರ ತಿರುವನ್ನು ಪಡೆಯಿತು.

ಹಾಳಾದ ಅರ್ಥ ವ್ಯವಸ್ಥೆ

ಅಧ್ಯಕ್ಷ ಜು ಅ ಜೊ ಅಧಿಕಾರ ವಹಿಸಿಕೊಂಡ ಕೂಡಲೇ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸಲು ಕ್ರಮ ಕೈಗೊಂಡರು. 18 ವರ್ಷಗಳ ಮಿಲಿಟರಿ ಆಡಳಿತದಿಂದಾಗಿ ದೇಶವು ದಿವಾಳಿಯ ಸ್ಥಿತಿಯನ್ನು ತಲುಪಿದ್ದಿತು. ಈ ಪರಿಸ್ಥಿತಿಯಲ್ಲಿ ವಿದೇಶಗಳಿಗೆ ನೀಡಬೇಕಾದ ಸಾಲದ ಮರು ಪಾವತಿಯನ್ನು ಸರ್ಕಾರ ನಿಲ್ಲಿಸಿತು. ಸುಮಾರು 360 ಮಿಲಿಯನ್ ಡಾಲರ್‌ಗಳನ್ನು ಕೃಷಿ, ಆರೋಗ್ಯ, ಶಕ್ತಿ, ಶಿಕ್ಷಣ ಮತ್ತು ಗಣಿ ಉದ್ಯಮದ ಬೆಳವಣಿಗೆಗೆ ಹೂಡಲಾಯಿತು.

ಕಾರ್ಮಿಕರ ವೇತನವನ್ನು ಶೇಕಡ 70 ಹೆಚ್ಚಿಸಲಾಯಿತು. ಅಲ್ಲದೆ ಕಾರ್ಮಿಕ ಪ್ರತಿನಿಧಿಗಳನ್ನು ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಆಡಳಿತಲ್ಲಿ ಸೇರಿಸಲಾಯಿತು.

ಹೊಸ ಆಡಳಿತವು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಹೊಸ ಅಧ್ಯಾಯ ತೆರೆದು ಕ್ಯೂಬಾ ಮತ್ತು ಸ್ಯಾಂಡಿನಿಸ್ಟ ನಿಕಾರಗುವ ಗಳ ಜೊತೆ ರಾಜ ತಾಂತ್ರಿಕ ಸಂಭಂದ ಬೆಳಸಿತು. ಮಧ್ಯ ಅಮೆರಿಕಾದಲ್ಲಿನ ಸಾಮ್ರಾಜ್ಯ ಶಾಹಿಗಳ ಪಾತ್ರವನ್ನು ನಿರಂತರವಾಗಿ ಖಂಡಿಸಿತು. ಅಲ್ಲದೆ ಗ್ರೆನಡದ ಮೇಲಿನ ಅಮೆರಿಕದ ಆಕ್ರಮಣವನ್ನು ಖಂಡಿಸಿತು.

ನುಂಗಲಾರದ ತುತ್ತು

ಸಾಮ್ರಾಜ್ಯ ಶಾಹಿಗಳಿಗೆ ಇದೊಂದು ನುಂಗಲಾರದ ತುತ್ತಾಗಿ ಹೊಸ ಸರ್ಕಾರವನ್ನು ಉರುಳಿಸಲು ಪ್ರಯತ್ನ ಪ್ರಾರಂಭಿಸಿತು. ದೇಶದ ಸಂಕಷ್ಟ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಳ್ಳಲು ವಿರೋಧ ಪಕ್ಷಗಳು ಬಂಡವಾಳಶಾಹಿಗಳ ನೆರವನ್ನು ಪಡೆದರು. ಅಲ್ಲದೆ ಕಾರ್ಮಿಕರನ್ನು ಸರ್ಕಾರದ ವಿರುದ್ಧ ಎತ್ತಿ ಕಟ್ಟಲು ಪ್ರಯತ್ನಿಸಿದರು. ಸಿ.ಐ.ಎ. ನ ಸಕ್ರಿಯ ಬೆಂಬಲದೊಂದಿಗೆ ಪ್ರತಿಗಾಮಿ ಗುಂಪುಗಳು ಅಧ್ಯಕ್ಷರನ್ನು ಅಪಹರಿಸಿದರು. ಆದರೆ ತಾತ್ಕಾಲಿಕವಾಗಿ ಮಿಲಿಟರಿ ಕ್ಷಿಪ್ರಕ್ರಾಂತಿಯು ವಿಫಲಗೊಂಡಿದೆ. ಆದರೆ ಈ ಯಶಸ್ಸು ಎಡ ಶಕ್ತಿಗಳು ಸಾಧಿಸುವ ಐಕ್ಯತೆ ಮತ್ತು ಎಲ್ಲ ಜನ ವಿಭಾಗಗಳೊಡನೆ ಬೆಳೆಸುವ ಸಹಕಾರವನ್ನು ಅವಲಂಭಿಸಿದೆ.

ಮೊಂಕಾಡಾ ಆಕ್ರಮಣದ 31 ನೇ ವಾರ್ಷಿಕೋತ್ಸವ

ಜುಲೈ 26, 1953 ರ ಮುಂಜಾನೆ ಕ್ಯೂಬಾದಲ್ಲಿ ಫಿಡೆಲ್ ಕ್ಯಾಸ್ಟ್ರೋನ ತಂಡ ಸಾಂಟಿಯಾಗೋದ ಮೊಂಕಾಡ ಸೈನಿಕ ಶಿಬಿರದ ಮೇಲೆ ಧಾಳಿ ನಡೆಸಿತು. ಇದರ ಉದ್ದೇಶ ಬಾಟಿಸ್ಟಾ ಆಡಳಿತದ ವಿರುದ್ಧ ಜನತೆಯನ್ನು ಹೋರಾಟಕ್ಕಿಳಿಸಲು ಶಸ್ತ್ರಾಸ್ತ್ರಗಳನ್ನು ಪಡೆದುಕೊಳ್ಳುವುದೇ ಆಗಿತ್ತು. ಕ್ಯಾಸ್ಟ್ರೋನ ತಂಡ ಉನ್ನತವಾದ ಧೈರ್ಯ—ಸಾಹಸಗಳನ್ನು ಮೆರೆದರೂ ಕೂಡ ಅನೇಕ ಕಾರಣಗಳಿಂದಾಗಿ ಮುಖ್ಯವಾಗಿ ಕಾರ್ಯಾಚರಣೆಯು ಅನಿರೀಕ್ಷಿತವಾಗಿರಬೇಕೆಂಬ ಯೋಜನೆಯಿದ್ದರೂ ಅದು ವೈರಿ ಪಡೆಗಳಿಗೆ ಹೇಗೋ ತಿಳಿದು ಬಿಟ್ಟಿದ್ದ ಕಾರಣದಿಂದಾಗಿ, ಸೈನಿಕ ನೆಲೆಯ ಮೇಲೆ ನಡೆಸಿದ ಧಾಳಿಯೇ ವಿಫಲಗೊಂಡಿತು. ಆಕ್ರಮಣಕಾರರು ಅನೇಕರು ಸೆರೆ ಸಿಕ್ಕಿದರು, ಅನೇಕರನ್ನು ಕ್ರೂರವಾಗಿ ಕೊಲ್ಲಲಾಯಿತು, ಉಳಿದವರನ್ನು ಬಂದೀಖಾನೆಗೆ ತಳ್ಳಿತು ಸರ್ಕಾರ. ಫಿಡಲ್ ಕ್ಯಾಸ್ಟ್ರೋಗೆ 15 ವರ್ಷಗಳ ಸೆರೆವಾಸ ಲಭಿಸಿತು.

ಮೊಂಕಾಡಾ ಸೈನಿಕ ಶಿಬಿರದ ಮೇಲೆ ನಡೆಸಿದ ಆಕ್ರಮಣ ಕ್ಯೂಬಾದ ಕ್ರಾಂತಿ ಪ್ರಾರಂಭಗೊಂಡುದರ ಸೂಚನೆಯಾಗಿತ್ತು ಮತ್ತು ಒಳಗಿನ ಮತ್ತು ಹೊರಗಿನ ದಮನಕಾರರ ವಿರುದ್ಧ ಬಂಡೆದ್ದ ಜನತೆಯ ಹೋರಾಟದ ಹೊಸ ಹಂತವಾಗಿತ್ತು. ಆದರೆ ಬಾಟಿಸ್ಟಾ ಆಡಳಿತ ಜುಲೈ 26 ರ ಚಳಿವಳಿಯ ನಂತರ ಹಿಂದೆಂದಿಗಿಂತಲೂ ಹೆಚ್ಚು ಕ್ರೂರವಾಗಿ ಜನತೆಯನ್ನು ಹಿಂಸಿಸಿತು. ಆದರೆ ಕ್ಯೂಬಾದ ಜನತೆ ಇವೆಲ್ಲವನ್ನೂ ವೀರೋಚಿತವಾಗಿ ಎದುರಿಸಿತು.

ಜುಲೈ 26ರ ಧಾಳಿ ಆಗಿನ ಕ್ರಾಂತಿಗೆ ಸಿಕ್ಕಿದ ಜಯವಲ್ಲದಿದ್ದರೂ ಕೂಡ ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೆ ಮಾರ್ಗ ತೋರಿಸಿ ಕ್ಯೂಬಾದಲ್ಲಿ ಸಮಾಜವಾದದ ಪ್ರವೇಶಕ್ಕೆ ಬಾಗಿಲು ತೆರೆಯಿತು.

ಇದಾದ ಐದು ವರುಷ, ಐದು ತಿಂಗಳು ಮತ್ತು ಐದು ದಿನಗಳ ನಂತರ ಕ್ಯೂಬಾದಲ್ಲಿ ಕ್ರಾಂತಿಗೆ ಜಯ ಲಭಿಸಿತು.

"ಮೊಂಕಾಡಾ ಆಕ್ರಮಣವಿಲ್ಲದಿದ್ದ ಪಕ್ಷದಲ್ಲಿ "ಗ್ರಾನ್‌ಮಾ" ಇರುತ್ತಿರಲಿಲ್ಲ. "ಸಿಯಾರಾ ಮಿಸ್ತ್ರಾ"ದಲ್ಲಿ ಹೋರಾಟವಿರುತ್ತಿರಲಿಲ್ಲ. ಮತ್ತು ಜನವರಿ 1, 1959ರ ಅದ್ಭುತ ವಿಜಯ ಲಭಿಸುತ್ತಿರಲಿಲ್ಲ" ಎಂಬುದಾಗಿ ಕಮ್ಯುನಿಸ್ಟ್ ಪಾರ್ಟಿ ಆಫ್ ಕ್ಯೂಬಾದ ಪ್ರಥಮ ಸಮ್ಮೇಳನದಲ್ಲಿ ಫಿಡೆಲ್ ಕ್ಯಾಸ್ಟ್ರೋ ಅವರು ಮಾತನಾಡುತ್ತಾ ಹೇಳಿರುವುದು ಎಷ್ಟೊಂದು ಅರ್ಥಪೂರ್ಣವಾದುದು.

ಚುನಾವಣೆಗಾಗಿ ರೀಗನ್‌ರ ಶಾಂತಿಪ್ರಿಯತೆಯ ಸೋಗು

— ವಿ. ಕೊರ್ಶುನೊವ್

ಅಮೇರಿಕದಲ್ಲಿ ರಾಷ್ಟ್ರಪತಿ ಚುನಾವಣೆಯ ಪ್ರಚಾರದ ಕಾವು ಏರುತ್ತಿದ್ದಂತೆ ಅಧ್ಯಕ್ಷ ರೀಗನರ "ನೂತನ" ವಿದೇಶಾಂಗ ನೀತಿ ಧೋರಣೆಗಳ ಬಗ್ಗೆ ಹೊಸ ವ್ಯಾಖ್ಯಾನಗಳು ಅಲ್ಲಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಅಮೇರಿಕದ ರಿಪಬ್ಲಿಕನ್ ಪಕ್ಷದ ಆಡಳಿತ ವಲಯಗಳು ಜಾಗತಿಕ ಸಮಸ್ಯೆಗಳ ಬಗ್ಗೆ ಹೊಸ ನಿಲುವು ವ್ಯಕ್ತಪಡಿಸ ತೊಡಗಿವೆ. ಅವರ ಮೂಲಭೂತ ಕಾಳಜಿ ಶಾಂತಿ ಈ ದಿಸೆಯಲ್ಲಿ ಅವು ಸದ್ಭಾವನೆ ವ್ಯಕ್ತಪಡಿಸುತ್ತಿವೆ ಎಂದು ಹೇಳಲಾಗುತ್ತಿದೆ. ಅದೂ ಅಲ್ಲದೆ ಯಾವುದೇ ಕ್ಷಣದಲ್ಲೂ ಯಾವುದೇ ಸಮಸ್ಯೆಗಳ ಬಗ್ಗೆ ಯಾವುದೇ ಸ್ಥಳದಲ್ಲೂ ಸೋವಿಯತ್ ಒಕ್ಕೂಟದೊಂದಿಗೆ ಮಾತುಕತೆಗೆ ಸಿದ್ಧ ಎಂದು ಅವು ಹೇಳಿಕೊಳ್ಳುತ್ತಿವೆ. ಅಮೇರಿಕದ ಆಡಳಿತ ಈ ಎಲ್ಲಾ ಹೇಳಿಕೆಗಳನ್ನು ನೀಡುತ್ತಿದೆ ಮಾತ್ರವಲ್ಲ ಸೋವಿಯತ್ ಒಕ್ಕೂಟವು ಈ ಮಹಾ ಪರಿವರ್ತನೆಗಳ ಬಗ್ಗೆ ಲಕ್ಷ್ಯ ಹರಿಸುತ್ತಿಲ್ಲ ಎಂದು ವ್ಯಥೆಪಟ್ಟುಕೊಳ್ಳುತ್ತಿದೆ. ಮಾಸ್ಕೋದ ಆಡಳಿತ ಅಮೇರಿಕದ ಶಾಂತಿ ಉಪಕ್ರಮಗಳಿಗೆ ತಕ್ಕುದಾದ ಉದಾರತೆಯ ಪ್ರತಿಕ್ರಿಯೆ ವ್ಯಕ್ತಪಡಿಸುವ ಬದಲು ಅಪನಂಬಿಕೆಯಿಂದ ನೋಡುತ್ತಿದೆ ಎಂದು ಹೇಳುತ್ತಿದೆ.

ಎಲ್ಲ ಬಗೆಯ ಸಂವಾದಗಳಿಗೆ ತಾವು ಸಿದ್ಧ ಎಂದು ಶ್ವೇತಭವನದ ಆಡಳಿತದ ವರಿಷ್ಠರು ಹೇಳುತ್ತಾರೆ ಮಾತ್ರವಲ್ಲ, ಸಂಭಂದಗಳಲ್ಲಿ ಪಾಲುಗೊಳ್ಳಲು ಪ್ರತಿದಿನವೂ ಮಾಸ್ಕೋದ ಆಡಳಿತಕ್ಕೆ ಆಹ್ವಾನ ನೀಡುತ್ತಿದ್ದಾರೆ. ಆದರೆ ಸಂವಾದಗಳ ಬಗ್ಗೆ ಕೆಲವೊಂದು ನಿರ್ದಿಷ್ಟ ಸಮಸ್ಯೆಗಳ ಕುರಿತು [ಪ್ರಸಕ್ತ ಸಂದರ್ಭದಲ್ಲಿ ಬಾಹ್ಯಾಂತರಿಕ್ಷ ಮಿಲಿಟರೀಕರಣಗೊಳ್ಳುವುದನ್ನು ತಪ್ಪಿಸುವುದು] ಸೋವಿಯತ್ ಒಕ್ಕೂಟವು ಸಲಹೆ ಮಾಡಿದರೆ ಅಮೇರಿಕ ಉಪಾಯದಿಂದ ತಪ್ಪಿಸಿಕೊಳ್ಳುತ್ತಿದೆ. ಬಾಹ್ಯಾಂತರಿಕ್ಷ ಮಿಲಿಟರೀಕರಣಗೊಳ್ಳುವುದನ್ನು ತಡೆಹಿಡಿಯುವುದು ಅತ್ಯಂತ ಪ್ರಧಾನ ಸಮಸ್ಯೆಯಾಗಿದೆ. ಆದರೆ ಅಮೇರಿಕ ಅವುಗಳ ಬಗ್ಗೆ ಸಂವಾದಗಳು ನಡೆಯಲು ಕೆಲವು ಷರತ್ತುಗಳನ್ನು ಹಾಕುತ್ತಿದೆ. ಬಾಹ್ಯಾಂತರಿಕ್ಷದ ಮಿಲಿಟರೀಕರಣ ಸಮಸ್ಯೆಯನ್ನು ಅದು ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಪರಿಮಿತಿ ಮತ್ತು ಅವನ್ನು ಕಮ್ಮಿ ಮಾಡುವುದಕ್ಕೆ ಸಂಬಂಧಿಸಿದ ಮಾತುಕತೆಗಳೊಂದಿಗೆ ಲಗತ್ತಿಸಲು ಆರಂಭಿಸಿದೆ. ವಾಸ್ತವವಾಗಿ ವಾಷಿಂಗ್ಟನ್ ಆಡಳಿತವೇ ಇತ್ತೀಚೆಗೆ ಈ ಮಾತುಕತೆಗಳನ್ನು ಮುರಿಯಿತು.

ನ್ಯೂಕ್ಲಿಯರ್ ಯುದ್ಧ ಸಂಭವಿಸುವುದನ್ನು ತಡೆಗಟ್ಟಲು ನಡೆಯುತ್ತಿರುವ ಎಲ್ಲ ಸಮಂಜಸ ಪ್ರಯತ್ನಗಳಿಗೆ ವಿಘ್ನ ಉಂಟು ಮಾಡಲು ಶ್ವೇತಭವನದಲ್ಲಿರುವ ಪ್ರಸಕ್ತ ಆಡಳಿತಗಾರರು ಆಶಿಸಿದ್ದಾರೆ. ಭೂ ಪ್ರದೇಶದಿಂದ ಹಾಗೂ ಬಾಹ್ಯಾಂತರಿಕ್ಷದಿಂದ ಸಮರ ಆರಂಭಿಸಬಲ್ಲ ಸಾಮರ್ಥ್ಯವನ್ನು ಅಮೇರಿಕ ಕರಗತ ಮಾಡಿಕೊಳ್ಳುತ್ತಿದೆ. ಅಮೇರಿಕದ ಪತ್ರಿಕೆಗಳಲ್ಲಿ ಪ್ರಕಟವಾಗುವ ವಿವಿಧ ಸುದ್ದಿಗಳನ್ನು ವಿಶ್ಲೇಶಿಸಿದಾಗ ಇದು ಸ್ಪಷ್ಟವಾಗುತ್ತದೆ. ಇವೆಲ್ಲದರೊಂದಿಗೆ ಚುನಾವಣೆ ವರ್ಷದ ಅಂತ್ಯದವರೆಗೂ ಶ್ವೇತಭವನದ ವರಿಷ್ಠರು ತಮ್ಮ ಸೋಗಿನ ಶಾಂತಿಪ್ರಿಯತೆಯನ್ನು ಪ್ರದರ್ಶಿಸುತ್ತಾ ಇರುತ್ತಾರೆ. ಮಾತುಕತೆಗಳನ್ನು ಆರಂಭಿಸಲು ರಚನಾತ್ಮಕವಾದ ನಿಲುವು ಅವರಿಗಿಲ್ಲ.

ಕೃಪೆ: ಸೋವಿಯತ್ ಲೇಖನ ಮಾಲೆ

ಕನಕಪುರದಲ್ಲಿ

ವಿದ್ಯಾರ್ಥಿ ಯುವಜನರ ಸಭೆ

29-7-84 ರಂದು ಭಾನುವಾರ ಬೆಂಗಳೂರು ಜಿಲ್ಲೆಯ ಕನಕಪುರದಲ್ಲಿ ವಿದ್ಯಾರ್ಥಿ-ಯುವಜನರ ಜಂಟಿ ಸಭೆಯೊಂದು ಜರುಗಿತು. ಪ್ರಗತಿಪರ ಚಳುವಳಿಯನ್ನು ಬೆಳೆಸುವ ಆಸಕ್ತಿಯಿಂದ ಬಂದಿದ್ದ ಸುಮಾರು 50 ಕ್ಕೂ ಹೆಚ್ಚು ಕಾರ್ಯಕರ್ತರನ್ನು ಉದ್ದೇಶಿಸಿ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ. ರಾಜ್ಯ ಶಾಖೆಗಳ ಕಾರ್ಯದರ್ಶಿಗಳಾದ ಎಸ್.ಆರ್. ಆರಾಧ್ಯ ಮತ್ತು ಎಸ್. ಶಿವರಾಂರವರು ಮಾತನಾಡಿದರು. ದೇಶದಲ್ಲಿನ ಅನಕ್ಷರತೆ, ನಿರುದ್ಯೋಗ, ಬಡತನ, ವರದಕ್ಷಿಣೆಯಂತಹ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಲು ಹಾಗೂ ಜಾತಿ, ಮತ್ತು ಭಾಷೆ, ಪ್ರದೇಶಗಳ ಆಧಾರದ ಸಂಕುಚಿತ ಪ್ರವೃತ್ತಿಗಳನ್ನು ಸೋಲಿಸಿ ರಾಷ್ಟ್ರದ ಸಮಗ್ರತೆಯನ್ನು ಕಾಪಾಡಲು ಕರೆ ನೀಡಿದರು. ಶ್ರೀ ಶ್ರೀನಿವಾಸ್ ರಾಜೆ ಅರಸ್‌ರವರು ಪ್ರಾರಂಭದಲ್ಲಿ ಸ್ವಾಗತ ಕೋರಿದರು. ಕನಕಪುರದಲ್ಲಿ ಎಸ್. ಎಫ್. ಐ. ಮತ್ತು ಡಿ.ವೈ.ಎಫ್.ಐ. ಶಾಖೆಗಳನ್ನು ರಚಿಸಲು ನಿರ್ಧರಿಸಲಾಯಿತು.

ಕಾಂಗ್ರೆಸ್ ಪಿತೂರಿಯನ್ನು ಸೋಲಿಸಿರಿ

[1ನೇ ಪುಟದಿಂದ]

ಸಿದೆ. ಒಂದು ಕಡೆ ಬೆಂಬಲಿಸುವ ನೀತಿಯನ್ನನುಸರಿಸಿ ಎಲ್ಲ ರೀತಿಯ ಅನುಕೂಲಗಳನ್ನು ಸರ್ಕಾರದಿಂದ ಪಡೆದು ಸಂತೃಪ್ತರಾಗದೆ ಇನ್ನೂ ಹೆಚ್ಚಿನ ಲಾಭ ಪಡೆಯಬೇಕೆಂಬ ದೃಷ್ಟಿಯಿಂದ ಸರ್ಕಾರಕ್ಕೆ ತಮ್ಮ ಬೆಂಬಲವನ್ನು ಕೊಡಲು ಕೆಲವು ಶರತ್ತುಗಳನ್ನು ಹಾಕಿದ್ದಾರೆ. ಎರಡು ಮಂತ್ರಿ ಸ್ಥಾನಗಳನ್ನು ಕೇಳುತ್ತಾರೆಂದು ಕೆಲ ಪತ್ರಿಕೆಗಳಲ್ಲಿ ಸುದ್ದಿ ಬಂದಿತ್ತು. ಅದನ್ನೀಗ ಭಾ.ಜ.ಪ. ವು ಹೇಳಿಲ್ಲ. ಅದರ ಬದಲಾಗಿ ಎಲ್ಲ ಹಂತಗಳಲ್ಲೂ ಜನತಾ ಪಕ್ಷ ಮತ್ತು ತಮ್ಮ ಪಕ್ಷದ ಜಂಟಿ ಸಮಿತಿಗಳಿರಬೇಕೆಂದೂ ಎಲ್ಲ ಅಭಿವೃದ್ಧಿ ಕಾರ್ಯಗಳಲ್ಲೂ ತಮ್ಮ ಪಕ್ಷವನ್ನು ಕೇಳಬೇಕೆಂದೂ, ಕೋರಿ ಮುಖ್ಯಮಂತ್ರಿಯವರಿಗೆ ಬರೆದಿದ್ದಾರೆ. ಸರ್ಕಾರ ತೆಗೆದುಕೊಳ್ಳುವ ಕ್ರಮಗಳನ್ನು ಮೊದಲು ಈ ಜಂಟಿ ಸಮಿತಿಗಳಲ್ಲಿ ಚರ್ಚೆಮಾಡಿ ತರಬೇಕೆಂದಿದ್ದಾರೆ. ಈ ಸಲಹೆಯನ್ನು ಹೆಗಡೆಯವರು ತಿರಸ್ಕರಿಸಿದ್ದರೂ ಆ ಪಕ್ಷಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟು ಹಲವು ಬೋರ್ಡ್‌ಗಳ ಅಧ್ಯಕ್ಷ ಸ್ಥಾನಗಳನ್ನೂ, ವಿಧಾನ ಪರಿಷತ್ತಿಗೊಂದು ಸ್ಥಾನವನ್ನು (ಶಾಸನ ಸಭಾ ಕ್ಷೇತ್ರದಿಂದ), ನೇಮಕಾತಿ ಸಮಿತಿಗಳಲ್ಲೂ ಇತರ ಸಮಿತಿಗಳಲ್ಲೂ ಅತ್ಯಧಿಕ ಪ್ರಾತಿನಿಧ್ಯ ಕೊಟ್ಟ ಪರಿಣಾಮವಾಗಿ ಈಗ ಹಲವು ಶರತ್ತುಗಳನ್ನು ಹಾಕುವ ಮಟ್ಟಕ್ಕೆ ಭಾ. ಜ. ಪ. ವು ಹೋಗಿರುವುದರಲ್ಲಿ ಆಶ್ಚರ್ಯವಿಲ್ಲ. ರಾಜ್ಯದ ಹಲವಾರು ಕಡೆಗಳಲ್ಲಿ ಈ ಸರ್ಕಾರ ತಮ್ಮ ಹಿಡಿತದಲ್ಲಿರುವ ಸರ್ಕಾರವೆಂಬಂತೆ ಅವರು ವರ್ತಿಸುತ್ತಿದ್ದಾರೆಂದೂ ಇದರಿಂದ ಜನ ಬೇಸತ್ತಿದ್ದಾರೆಂದೂ, ಜನತಾ ಪಕ್ಷದ ಕಾರ್ಯಗಳಲ್ಲೂ ಈ ಭಾವನೆ ಬಂದಿದೆಂದೂ ವರದಿಗಳು ಬಂದಿವೆ. ಇದು ಅಪಾಯಕಾರಿಯಾದುದು. ಇದನ್ನು ಬಂಗಾರಪ್ಪನವರೂ ಇತರರೂ ಉತ್ಪ್ರೇಕ್ಷೆ ಮಾಡಿ ಸರ್ಕಾರದ ವಿರುದ್ಧ ಪ್ರಚಾರ ಮಾಡಲು ಉಪಯೋಗಿಸಿದ್ದಾರೆ. ಜನತಾ ಪಕ್ಷದ ಸರ್ಕಾರವು ಭಾ. ಜ. ಪ. ದ ಬೆದರಿಕೆಗೆ ಮಣಿಯದೆ ಧೈರ್ಯದಿಂದ ಜಾತ್ಯಾತೀತ ಧೋರಣೆಯನ್ನನುಸರಿಸಲು ಮುಂದೆ ಬರಬೇಕಾದುದು ಅಗತ್ಯ.

ಈ ಸಂದರ್ಭವನ್ನು ಕಾಂಗ್ರೆಸ್ಸಿನವರು ಸುವರ್ಣಾವಕಾಶವೆಂದು ತಿಳಿದು ಸರಕಾರವನ್ನು ಉರುಳಿಸಲು ಹೊಸ ಪ್ರಯತ್ನ ನಡೆಸಿದ್ದಾರೆ. ರಾಜ್ಯದಲ್ಲಿ ಈಗ ಸರಕಾರವೇ ಇಲ್ಲವೆಂದೂ, ಅರಾಜಕತೆ ಇದೆಯೆಂದೂ ಪ್ರಚಾರ ಮಾಡುತ್ತಿದ್ದಾರೆ. ಸರಕಾರ ಉರುಳಿಸಲು ಹಿಂದೆ ಮಾಡಿದ ಪಿತೂರಿಗಳೆಲ್ಲ ವಿಫಲಗೊಂಡಿದ್ದರೂ, ಕಾಂಗ್ರೆಸ್ಸಿನ ಎಲ್ಲ ಘಟಾನೂಘಟಿಗಳೂ ಈಗ ಒಂದಾಗಿದ್ದೇವೆಂದು ಸಾರುತ್ತಾ ಇನ್ನು ಸದ್ಯದಲ್ಲೇ ಈ ಸರಕಾರವು ಉರುಳುತ್ತದೆಂದೂ ಮುಂದೆ ತಮ್ಮ ಸರಕಾರವೇ ಬರುವುದೆಂದೂ ಹೇಳುತ್ತಿದ್ದಾರೆ. ಆಗಸ್ಟ್ 15 ರೊಳಗೆ ಈ ಸರಕಾರವು ವಜಾ ಆಗುತ್ತದೆಂದೂ ರಾಷ್ಟ್ರಾಧ್ಯಕ್ಷರ ಆಡಳಿತ ಬರುತ್ತದೆಂದೂ ಪೊಳ್ಳು ಸುದ್ದಿಗಳನ್ನು ಕಾಂಗ್ರೆಸ್ಸಿನವರು ಪ್ರಚಾರ ಮಾಡುತ್ತಿದ್ದಾರೆ. ಸರಕಾರವನ್ನು ವಿಸರ್ಜನೆ ಮಾಡಬೇಕೆಂದು ರಾಜ್ಯದ ಹಲವು ಕಾಂಗ್ರೆಸ್ ಲೋಕಸಭಾ ಸದಸ್ಯರು ಪ್ರಧಾನ ಮಂತ್ರಿಯವರಿಗೆ ಕೋರಿದ್ದಾರೆ. ಇದೆಲ್ಲ ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್ಸೇತರ ಸರಕಾರಗಳನ್ನು ಉರುಳಿಸುವ ಕಾಂಗ್ರೆಸ್ ಪಕ್ಷದ ಯೋಜನೆಯ ಅಂಗವಾಗಿದೆ. ಅಜೀಜ್ ಸೇಟ್ ಮತ್ತು ಚಂದ್ರಪ್ರಭ ಅರಸ್ ರವರ ರಾಜೀನಾಮೆಯು ಇದಕ್ಕೆ ಪುಟ ಕೊಟ್ಟಿದೆ. ಸರಕಾರವನ್ನುರುಳಿಸಲು ಪಕ್ಷಾಂತರ ಮತ್ತಿತರ ಪಿತೂರಿಗಳನ್ನು ನಡೆಸಿ ವಿಫಲಗೊಂಡಿದ್ದ ಕಾಂಗ್ರೆಸ್ಸಿಗೆ ಈಗ ಮತ್ತೆ ಹೊಸ ರೆಕ್ಕೆ ಬಂದಂತಾಗಿದೆ.

ಪ್ರಜಾಪ್ರಭುತ್ವದ ಮೇಲೆ ಧಾಳಿ

ಆದರೆ ಇದೆಲ್ಲಾ ಕಾಂಗ್ರೆಸ್ಸಿನವರ ಹಗಲು ಕನಸೆಂದೇ ನಾವು ಹೇಳಬೇಕಾಗಿದೆ. ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ಸೇತರ ಸರಕಾರದ ಬಗ್ಗೆ ರಾಜ್ಯದ ಜನತೆಗೆ ಅಭಿಮಾನವಿದೆ. ಇನ್ನೆಂದೂ ಕಾಂಗ್ರೆಸ್ ದುರಾಡಳಿತೆಯನ್ನು ತಲೆಯೆತ್ತಲು ಬಿಡಲಾರೆವೆಂಬ ನಿರ್ಧಾರ ಜನರಲ್ಲಿದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಜನತಾ ಮಂತ್ರಿಮಂಡಲದ ಬಗ್ಗೆ ಅಸಮಾಧಾನವಿರಬಹುದು. ರಾಜ್ಯದ ಜನತೆ ಈ ಸರಕಾರದಿಂದ ನಿರೀಕ್ಷಿಸಿದಷ್ಟು ಕೆಲಸ ಆಗದಿರಬಹುದು. ಇದರಿಂದ ಹಲವು ವಿಭಾಗದ ಜನತೆಯಲ್ಲಿ ಅತೃಪ್ತಿ, ಅಸಮಾಧಾನಗಳು ಬಂದಿವೆ. ಇತ್ತೀಚೆಗೆ ಸರಕಾರ ತೆಗೆದುಕೊಂಡ ನಿರ್ಧಾರಗಳು ಖಂಡನೀಯವಾಗಿದೆ.

ಈಗ ದೇಶದಾದ್ಯಂತ ಪ್ರಜಾಪ್ರಭುತ್ವದ ಮೇಲೆ ಧಾಳಿ ನಡೆದಿದೆ. ಪಂಜಾಬಿನಲ್ಲಿ ಕಾಂಗ್ರೆಸ್ ಸರಕಾರ ನಡೆಸಿದ ಕ್ರಮಗಳ ಬಗ್ಗೆ ಈಗಾಗಲೇ ಐಕ್ಯರಂಗದಲ್ಲಿ ಸಾಕಷ್ಟು ವಿಷಯಗಳನ್ನು ಪ್ರಕಟಿಸಲಾಗಿದೆ.

ಸರಕಾರದ ನೀತಿಯಿಂದಾಗಿ ಸಿಖ್ ಜನಾಂಗದ ಮೇಲೆ ಧಾಳಿ ನಡೆದಿದೆ ಮತ್ತು ಪಂಜಾಬ್ ಜನತೆಯ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಲು ಸರಕಾರ ನಿರಾಕರಿಸುತ್ತಿದೆ. ಅಲ್ಲಿಯ ವಿಷಮ ಪರಿಸ್ಥಿತಿಗೆ ಸರಕಾರವೇ ಹೊಣೆಯಾಗಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಘಟನೆಗಳ ಬಗ್ಗೆ ಕಾ| ಇ.ಎಂ.ಎಸ್. ನಂಬೂದ್ರಿ ಪಾಡ್‌ರವರು ವಿಷದವಾಗಿ ಬರೆದಿದ್ದಾರೆ. ಇದು ಈಗಾಗಲೇ ಪ್ರಕಟವಾಗಿದೆ. ಈ ವಾರದಲ್ಲಿ ಅಲ್ಲಿ ನಡೆದ ಘಟನೆಗಳು ಕಾಂಗ್ರೆಸ್ಸಿನ ಪಿತೂರಿಗಳನ್ನು ಇನ್ನೂ ಹೆಚ್ಚು ಬಯಲಿಗೆಳೆದಿವೆ. ಪ್ರಜಾಪ್ರಭುತ್ವಕ್ಕೆ ತಿಲಾಂಜಲಿಯನ್ನು ಅವರು ಕೊಟ್ಟಿದ್ದಾರೆ.

ದೇಶದ ಆಗ್ನೇಯ ಭಾಗದಲ್ಲೂ ಈಶಾನ್ಯದಲ್ಲೂ ಮತ್ತಿತರ ಪ್ರದೇಶಗಳಲ್ಲೂ ವಿಚ್ಛಿದ್ರಕಾರಿ ಶಕ್ತಿಗಳು ಸತತವಾಗಿ ಕೆಲಸ ಮಾಡುತ್ತಿದ್ದು ಈ ದುಷ್ಟಶಕ್ತಿಗಳನ್ನು ಎದುರಿಸುವ ಬದಲು ಕಾಂಗ್ರೆಸ್ ಸರಕಾರದ ಧೋರಣೆಗಳು ಈ ಶಕ್ತಿಗಳಿಗೆ ಅನುಕೂಲಕರವಾಗಿದೆ.

ಇವತ್ತಿನ ಅವಶ್ಯಕತೆ

ದೇಶದ ಪ್ರಜಾಪ್ರಭುತ್ವ ಶಕ್ತಿಗಳಿಗೆ ಇದೊಂದು ಸವಾಲಾಗಿದೆ. ನಮ್ಮ ರಾಷ್ಟ್ರದಲ್ಲೂ ಪ್ರಜಾಸತ್ತಾತ್ಮಕ ಶಕ್ತಿಗಳು ಎಚ್ಚೆತ್ತು ಕಾಂಗ್ರೆಸ್ಸಿನ ಪಿತೂರಿಯನ್ನೆದುರಿಸಲು ಮುಂದಾಗಬೇಕಾಗಿದೆ. ಜನತಾ ಪಕ್ಷವು ಈಗಲಾದರೂ ಕಣ್ತೆರೆದು ಕಮ್ಯೂನಿಸ್ಟ್ ಮತ್ತಿತರ ಪ್ರಜಾಸತ್ತಾತ್ಮಕ ಪಾರ್ಟಿಗಳೂ, ಶಕ್ತಿಗಳೂ ಸಾಮೂಹಿಕ ಸಂಘಟನೆಗಳೊಂದಿಗೆ ಸೇರಿ ಪ್ರಚಾರ-ಪ್ರಕ್ಷೋಭೆಗಳನ್ನು ನಡೆಸಿ ಕಾಂಗ್ರೆಸ್ಸನ್ನೆದುರಿಸಲು ಮುಂದೆ ಬರಬೇಕು. ಜಾತೀಯವಾದಿಗಳಿಗೆ ಕಿಂಚಿತ್ತೂ ಪ್ರೋತ್ಸಾಹ ಕೊಡದೆ ಪ್ರಜಾಪ್ರಭುತ್ವವಾದಿಗಳನ್ನು ಒಟ್ಟು ಸೇರಿಸಿ ಹೋರಾಡುವುದು ಅಗತ್ಯ.

ಕೇಂದ್ರದ ಕಾಂಗ್ರೆಸ್ ಸರ್ಕಾರ ಹೆಗಡೆ ಸರ್ಕಾರವನ್ನು ಕಿತ್ತುಹಾಕುವ ಹೊಂಚು ಹಾಕುತ್ತಿರಬಹುದು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯು ಕಾಂಗ್ರೆಸ್ ಸರ್ವಾಧಿಕಾರವನ್ನೆದುರಿಸುವಾಗಲೇ ರಾಜ್ಯ ಸರ್ಕಾರದ ಜನವಿರೋಧಿ ಕ್ರಮಗಳನ್ನೂ ಎದುರಿಸಿಕೊಂಡು ಬಂದಿದೆ. ಕಾಂಗ್ರೆಸ್ ಸರ್ವಾಧಿಕಾರವನ್ನೆದುರಿಸುವುದು ನಮ್ಮ ಆದ್ಯಕರ್ತವ್ಯವೆಂದು ಸಿ.ಪಿ.ಎಂ. ತಿಳಿದಿದೆ. ಇದಕ್ಕೆ ನಮ್ಮ ಪಾರ್ಟಿಯು ಇತರ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಒಟ್ಟು ಸೇರಿ ಹೋರಾಡಲು ಕರೆ ಕೊಡುತ್ತದೆ.

ಎನ್. ಎಲ್. ಉಪಾಧ್ಯಾಯ

ರೈತರ ಭೂಮಿ ಕಸಿಯುವ

ಭೂ ಮಾಲೀಕರ ವಿರುದ್ಧ ಹೋರಾಟ

ಮಂಗಳೂರು ತಾಲ್ಲೂಕು ರೈತ ಸಂಘದ ಸಭೆಯು ಜುಲೈ 30 ರಂದು ಕಾ. ಯು. ಜನಾರ್ಧನ ನಾಯಕ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯದರ್ಶಿ ರಾಮಚಂದ್ರ ರವರು ಸಭೆಯನ್ನು ಸ್ವಾಗತಿಸಿ ತಾಲ್ಲೂಕಿನ ರೈತ ಸಂಘದ ಚಟುವಟಿಕೆಯ ವರದಿಯನ್ನು ಮಂಡಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ತೀರ್ಮಾನವನ್ನು ಅಧ್ಯಕ್ಷರು ಸಭೆಗೆ ವಿವರಿಸಿದರು.

ಮನೆ ನಿವೇಶನ, ಅಕ್ರಮ ದರಖಾಸ್ತುದಾರರು ಅನುಭವಿಸುತ್ತಿರುವ ತೊಂದರೆಗಳ ಬಗ್ಗೆ ಚರ್ಚೆ ನಡೆದು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಸಮಸ್ಯೆಗಳ ನಿವಾರಣೆಗಾಗಿ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿ ತೀವ್ರ ಹೋರಾಟ ನಡೆಸಬೇಕೆಂದು ತೀರ್ಮಾನ ಕೈಗೊಂಡಿತು. ಅಲ್ಲದೆ ಮಂಗಳೂರು ತಾಲ್ಲೂಕಿನ ಟ್ರಿಬ್ಯೂನಲ್‌ಗಳಲ್ಲಿ ರೈತರಿಗೆ ಸರಿಯಾಗಿ ನೋಟೀಸು ಜಾರಿ ಮಾಡದೆ ಕೆಲವು ಅಪೀಲಿನ ಕೇಸುಗಳು ನಡೆಯುತ್ತಿರುವುದೂ ಹಾಗೂ ಟ್ರಿಬ್ಯೂನಲ್ ಗಳಲ್ಲಿ ರೈತರ ಪರವಾಗಿ ತೀರ್ಮಾನವಾಗಿ ಸಿಕ್ಕಿದ ಭೂಮಿಯನ್ನು ಕಸಿದು ಕೊಳ್ಳುವ ಭೂಮಾಲೀಕರ ಪ್ರಯತ್ನಗಳನ್ನು ಪ್ರತಿಭಟಿಸಿ ಹೋರಾಡಬೇಕೆಂದು ನಿರ್ಣಯಿಸಲಾಯಿತು. ಮುಂದಿನ ಒಂದು ತಿಂಗಳಲ್ಲಿ ಪ್ರತಿ ಹಳ್ಳಿಯಲ್ಲೂ ಗ್ರಾಮ ಸಮಿತಿಗಳನ್ನು ರಚಿಸಿ ರೈತ ಸಂಘವನ್ನು ಬಲಪಡಿಸುವ, ರೈತ ಕಾರ್ಯಕರ್ತರ ಶಿಬಿರಗಳನ್ನು ನಡೆಸುವ ತೀರ್ಮಾನಗಳನ್ನು ಸಭೆ ಅಂಗೀಕರಿಸಿತು.

ಹೋಟೆಲ್ ಹಿಂದೂಸ್ತಾನ್‌ನಲ್ಲಿ 10 ಕಾರ್ಮಿಕರ ವಜಾ

ಬೆಂಗಳೂರಿನ ಹೋಟೆಲ್ ಹಿಂದೂಸ್ತಾನ್‌ನಲ್ಲಿ ಸುಮಾರು 35 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದು, 1980 ರಲ್ಲಿ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಹೋರಾಟ ಮಾಡಿ ಎಲ್ಲಾ ಕಾರ್ಮಿಕರನ್ನು ಖಾಯಂ ಮಾಡಲು ಸಾಧ್ಯವಾಯಿತು. ಇದೀಗ ಮಾಲಿಕರು ಇಲ್ಲಸಲ್ಲದ ಕುತಂತ್ರಗಳನ್ನು ನಡೆಸುತ್ತಿದ್ದಾರೆ. ಹಳೇ ಕಾರ್ಮಿಕರನ್ನು ತೆಗೆದು ಹಾಕುವ ಉದ್ದೇಶದಿಂದ, ಕಾಂಟ್ರಾಕ್ಟ್ ಆಧಾರದಲ್ಲಿ ಇದೀಗ ಹೊಸ ಕಾರ್ಮಿಕರನ್ನು ತೆಗೆದುಕೊಂಡಿದ್ದಾರೆ. ಈ ಕಾರ್ಮಿಕರನ್ನೂ ಸಹ ಖಾಯಂ ಮಾಡಲು ಸಂಘ ಒತ್ತಾಯಿಸಿತ್ತು. ಇದಕ್ಕೆ ಒಪ್ಪದ ಮಾಲೀಕರು ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದ್ದಾರೆ. ಕಾರ್ಮಿಕರು ಧರಣಿ ನಡೆಸಲೂ ಸಹ ಅವಕಾಶ ಕೊಡದೆ ಮಾಲೀಕರು ಕೋರ್ಟಿನಿಂದ ತಡೆಯಾಜ್ಞೆ ತಂದಿದ್ದಾರೆ. ಇದನ್ನು ರದ್ದುಪಡಿಸಬೇಕೆಂದು ಸಂಘವು ನ್ಯಾಯಾಲಯಕ್ಕೆ ಮೊರೆ ಹೊಕ್ಕಿದೆ.

ಮುಖ್ಯಮಂತ್ರಿ ಜೊತೆ ಚರ್ಚೆ

ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಆಗಸ್ಟ್ 3 ರಂದು ಸಿಪಿಐ (ಎಂ) ಮತ್ತು ಸಿಪಿಐ ಮುಖಂಡರ ಸಭೆ ಕರೆದಿದ್ದರು. ಈ ಸಭೆಯಲ್ಲಿ ಮುಂಬರುವ ಲೋಕಸಭೆ ಚುನಾವಣೆ ಮತ್ತು ಇಂದಿನ ರಾಜಕೀಯ ಪರಿಸ್ಥಿತಿಯ ಕುರಿತು ವಿಚಾರ ವಿನಿಮಯ ಮಾಡಲಾಯಿತು. ಇನ್ನೆಂಟು ದಿವಸದಲ್ಲಿ ಮತ್ತೊಮ್ಮೆ ಸಭೆ ಸೇರಿ ಸವಿಸ್ತಾರ ಚರ್ಚೆ ನಡೆಸಲಾಗುವುದು. ಸಿಪಿಐ (ಎಂ) ಪರವಾಗಿ ಪಿ. ರಾಮಚಂದ್ರರಾವ್, ಎಸ್. ಸೂರ್ಯನಾರಾಯಣರಾವ್ ಮತ್ತು ಎನ್. ಕೆ. ಉಪಾಧ್ಯಾಯರು ಭಾಗವಹಿಸಿದ್ದರು

Printed & Published by p. Ramachandra Rao by him on behalf of the Communist party of India (Marxist) Karnataka State Committee, K. V. Temple Street, Sultanpet, Bangalore-560053 Editoral and managerial office, L-56, K. V. Temple Street, Sultanpet B 53 Phone : 24514
Editor : P. Ramachandra Rao
Managing Editor : N. K. Upadhyaya